## ಅಧ್ಯಾಯ 19

# ಸೊದೋಮ ಮತ್ತು ಗೊಮೋರಗಳ ನಾಶನ

ಸೊದೋಮ ಮತ್ತು ಗೊಮೋರಗಳಿಗೋಸ್ಕರ ಅಬ್ರಹಾಮನು ವಿಜ್ಞಾಪನೆಯನ್ನು ಮಾಡಿದ್ದರ ಹೊರತಾಗಿಯೂ (18:23-33), ಈ ದುಷ್ಟ ಪಟ್ಟಣಗಳು ನಾಶನಕ್ಕೆ ನೇಮಕವಾಗಿದ್ದವು ಯಾಕೆಂದರೆ ಅವು ತಮ್ಮ ದುರ್ಮಾರ್ಗಗಳಲ್ಲಿ ಮುಂದುವರೆದಿದ್ದವು. ಈ ಅಧ್ಯಾಯದಲ್ಲಿ, ಅವರ ಮಿತಿಮೀರಿದ ಅಪರಾಧವು ದೃಷ್ಟಾಂತಪಡಿಸಲ್ಪಟ್ಟಿದೆ (19:1-11). ಲೋಟನನ್ನು ತಪ್ಪಿಸಿ ಕಾಪಾಡುವದರಲ್ಲಿ ದೇವರ ಕರುಣೆಯು ಕಂಡು ಬರುತ್ತದೆ (19:12-22), ಅದೇ ವೇಳೆಯಲ್ಲಿ ಸೊದೋಮ ಮತ್ತು ಗೊಮೋರಗಳನ್ನು ನಾಶಮಾಡುವದರಲ್ಲಿ ಆತನ ನ್ಯಾಯವು ತೋರಿ ಬರುತ್ತದೆ (19:23-29). ಲೋಟನ ಪುತ್ರಿಯರು ನಿಷಿದ್ಧ ರಕ್ತಸಂಬಂಧಿಗಳೊಡನೆ ಸಂಭೋಗ ನಡಿಸುವ ಕೃತ್ಯದೊಂದಿಗೆ ಅಧ್ಯಾಯವು ಅಂತ್ಯಗೊಳ್ಳುತ್ತದೆ, ಅದು ಮೋವಾಬ ಮತ್ತು ಅಮ್ಮೋನರು ಹೇಗೆ ಉದಯಿಸಿದರೆಂಬುದನ್ನು ವಿವರಿಸುತ್ತದೆ (19:30-38). ಅನಂತರದ ಕಾಲಗಳಲ್ಲಿ, ಈ ಜನಾಂಗಗಳು ಇಸ್ರಾಯೇಲಿನ ಮೂಡಲಿನಲ್ಲಿರುವ ಗಡಿ ದೇಶಗಳಾಗಲಿದ್ದವು.

## ಜನರ ದುಷ್ಟತನವು ದೃಷ್ಟಾಂತೀಕರಿಸಲ್ಪಟ್ಟಿದ್ದು (19:1-11)

**1ಆ ದೂತರಿಬ್ಬರು ಸಾಯಂಕಾಲದಲ್ಲಿ ಸೊದೋಮಿಗೆ ಬಂದಾಗ ಲೋಟನು ಸೊದೋಮಿನ
ಊರುಬಾಗಲಲ್ಲಿ ಕೂತುಕೊಂಡಿದ್ದನು. ಅವನು ಅವರನ್ನು ಕಂಡಾಗ ಎದ್ದು ಎದುರುಗೊಂಡು
ಬೊಗ್ಗಿ ನಮಸ್ಕರಿಸಿ - 2ಸ್ವಾಮಿಗಳೇ, ನಿಮ್ಮ ದಾಸನ ಮನೆಗೆ ಬಂದು ಇಳುಕೊಂಡು
ಕಾಲುಗಳನ್ನು ತೊಳಕೊಳ್ಳಿರಿ; ಬೆಳಿಗ್ಗೆ ನಿಮ್ಮ ಮಾರ್ಗ ಹಿಡುಕೊಂಡು ಹೋಗಬಹುದು ಅಂದನು.
ಅವರು - ಹಾಗಲ್ಲ, ಬೀದಿಯಲ್ಲೇ ರಾತ್ರಿ ಕಳೆಯುತ್ತೇವೆ, 3ಅನ್ನಲು ಅವನು ಅವರನ್ನು ಬಹಳ
ಬಲವಂತಮಾಡಿದ್ದರಿಂದ ಅವರು ಅವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಒಪ್ಪಿದರು. ಅವರು
ಮನೆಗೆ ಬಂದಾಗ ಅವನು ಹುಳಿಯಿಲ್ಲದ ರೊಟ್ಟಿಗಳನ್ನು ಸುಡಿಸಿ ಔತಣವನ್ನು ಮಾಡಿಸಲು ಅವರು
ಊಟಮಾಡಿದರು. 4ಅವರು ಮಲಗುವದಕ್ಕಿಂತ ಮುಂಚೆ ಹುಡುಗರು ಮುದುಕರು ಸಹಿತವಾಗಿ
ಸೊದೋಮಿನ ಪಟ್ಟಣದವರೆಲ್ಲರೂ ಒಗ್ಗಟ್ಟಾಗಿ ಮನೆಯನ್ನು ಸುತ್ತಿಕೊಂಡು ಲೋಟನಿಗೆ - 5ಈ
ರಾತ್ರಿ ನಿನ್ನ ಬಳಿಗೆ ಬಂದ ಮನುಷ್ಯರು ಎಲ್ಲಿ? ಅವರನ್ನು ಹೊರಕ್ಕೆ ತೆಗೆದುಕೊಂಡು ಬಾ;
ಅವರೊಡನೆ ನಮಗೆ ಸಂಗಮವಾಗಬೇಕೆಂದು ಕೂಗಿ ಹೇಳಿದರು. 6ಲೋಟನು ಅವರ ಬಳಿಗೆ
ಹೊರಕ್ಕೆ ಬಂದು ತನ್ನ ಹಿಂದೆ ಕದಹಾಕಿ - 7ಅಣ್ಣಂದಿರೇ, ಈ ಪಾತಕವನ್ನು ಮಾಡಬೇಡಿರಿ. ಕೇಳಿರಿ,
8ನನಗೆ ಪುರುಷರನ್ನರಿಯದ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ; ಅವರನ್ನಾದರೂ ನಿಮಗೆ ತಂದು**

**ಒಪ್ಪಿಸೇನು; ಮನಸ್ಸು ಬಂದಂತೆ ಮಾಡಬಹುದು; ಆದರೆ ಆ ಮನುಷ್ಯರು ನನ್ನ ಆಶ್ರಯಕ್ಕೆ
ಬಂದವರು; ಅವರಿಗೆ ಏನೂ ಮಾಡಕೂಡದು ಎಂದು ಹೇಳಲು ಅವರು - [9]ದಾರಿ ಬಿಡು ಎಂದು
ಹೇಳಿ - ಇವನು ಯಾರೋ ಒಬ್ಬ ಪರದೇಶಿಯಾಗಿ ಬಂದು ಈಗ ನ್ಯಾಯ
ಹೇಳುವವನಾಗಬೇಕೋ; ಆ ಮನುಷ್ಯರಿಗೆ ಕೇಡು ಮಾಡುವದಕ್ಕಿಂತ ಹೆಚ್ಚಾಗಿ ನಿನಗೇ ಕೇಡು
ಮಾಡುತ್ತೇವೆ ಎಂದು ಹೇಳಿ ಲೋಟನ ಮೇಲೆ ಬಿದ್ದು ಬಹಳವಾಗಿ ಇರುಕಿಸಿ ಕದವನ್ನು ಒಡೆದು
ಬಿಡಬೇಕೆಂದಿದ್ದರು. [10]ಆದರೆ ಒಳಗಿದ್ದ ಆ ಮನುಷ್ಯರು ಕೈಚಾಚಿ ಲೋಟನನ್ನು ತಮ್ಮ ಕಡೆಗೆ
ಮನೆಯೊಳಗೆ ಸೇರಿಸಿ ಕದಮುಚ್ಚಿದರು. [11]ಇದಲ್ಲದೆ ಅವರು ಮನೆಯ ಹೊರಗಿದ್ದ ಮನುಷ್ಯರಿಗೆ
ಚಿಕ್ಕವರಿಗೂ ದೊಡ್ಡವರಿಗೂ ಕೂಡ ಕಣ್ಣು ಮೊಬ್ಬಾಗುವಂತೆ ಮಾಡಿದ್ದರಿಂದ ಇವರು ಬಾಗಿಲು
ಯಾವದೆಂದು ತಿಳಿಯದೆ ಬೇಸರಗೊಂಡರು.**

**ವಚನ 1. ಆ ದೂತರಿಬ್ಬರು ಸಾಯಂಕಾಲದಲ್ಲಿ ಸೊದೋಮಿಗೆ ಬಂದರು** ಎಂಬುದಾಗಿ ವಾಕ್ಯವು ತಿಳಿಸುತ್ತದೆ. "ದೂತರು" ಎಂಬುದನ್ನು ಅನುವಾದಿಸಿರುವ ಪದವು (מַלְאָכִים, *ಮಲಅಕಿಮ್)* ಅಕ್ಷರಶಃ "ಸಂದೇಶಕರು" ಎಂಬ ಅರ್ಥವನ್ನು ಹೊಂದಿರುತ್ತದೆ. ಅದು ಮಾನವ ಅಥವಾ ದೈವಿಕ ಸಂದೇಶಕರನ್ನು ಸೂಚಿಸಬಹುದಾದರೂ, ಇವರು ಹಿಂದಿನ ಅಧ್ಯಾಯದಲ್ಲಿ ಯೆಹೋವನ ಸಂಗಡ ಬಂದಿದ್ದಂಥ ಅದೇ ದೇವದೂತರೇ ಆಗಿರುವರು ಕಥನವು ಮುಂದುವರೆದಂತೆ ಈ ಗುರುತು ಇನ್ನಷ್ಟು ಸ್ಪಷ್ಟಗೊಳ್ಳುತ್ತದೆ (ನೋಡಿರಿ 19:10, 11).

ಇದು 18ನೇ ಅಧ್ಯಾಯದಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿದ ಅದೇ ದಿನದ ಸಂಜೆಯೋ ಅಥವಾ ಅವರು ಸೊದೋಮಿಗೆ ಮರು ದಿನ ಸಾಯಂಕಾಲದಲ್ಲಿ ಬಂದರೋ ಎಂಬುದನ್ನು ಕಥಾನಿರೂಪಕನು ತಿಳಿಸುವದಿಲ್ಲ. ಅದು ಅದೇ ದಿನದ ಸಾಯಂಕಾಲವಾಗಿದ್ದಲ್ಲಿ ಮತ್ತು ಸೊದೋಮ ಪಟ್ಟಣವ ಮೃತ ಸಮುದ್ರದ ಉತ್ತರಕ್ಕಿರುವ ತುದಿ ಆಗಿರುವದಾದಲ್ಲಿ, ಮಮ್ರೆಯಿಂದ (ಅಥವಾ ಹೆಬ್ರೋನ) ಸೊದೋಮಿನ ವರೆಗಿನ ಪ್ರಯಾಣವು ಸುಮಾರು ಇಪ್ಪತ್ತು ಮೈಲಿಗಳಷ್ಟಾಗಿರಬಹುದಿತ್ತು. ಸೊದೋಮ ಪಟ್ಟಣವು ಮೃತ ಸಮುದ್ರದ ದಕ್ಷಿಣ ತುದಿಯಲ್ಲಿರುವದಾದಲ್ಲಿ, ಅಬ್ರಹಾಮನ ಅತಿಥಿಗಳು ತಮ್ಮ ಮುಂದಿನ ಸ್ಥಳವನ್ನು ಸೇರಬೇಕಾದರೆ ಕನಿಷ್ಠ ನಾಲ್ವತ್ತು ಮೈಲಿಗಳಷ್ಟು ದೂರ ಪ್ರಯಾಣಿಸಬೇಕಾಗಿರುತ್ತಿತ್ತು. ಸಾಧಾರಣ ಮನುಷ್ಯರು ಆ ಕ್ಲುಪ್ತ ದೂರವನ್ನು ನಡೆದು ತಲುಪಿರಲಾರರು, ಮತ್ತು ದೂರದ ಪ್ರಯಾಣವನ್ನು ನಡು ಮಧ್ಯಾಹ್ನ ಹಾಗೂ ಸಾಯಂಕಾಲದ ನಡುವೆಯಂತೂ ಮಾಡಿರಲು ಸಾಧ್ಯವೇ ಇರುತ್ತಿರಲಿಲ್ಲ. ದೂರವು ಎಷ್ಟೇ ಇದ್ದರೂ ಸರಿಯೇ, ಹಿಂದಿನ ಅಧ್ಯಾಯದಲ್ಲಿನ ಘಟನೆಗಳು ನಡೆದ ಅದೇ ದಿನದಂದು ಅವರು ಅಲ್ಲಿಗೆ ಬಂದು ಸೇರಿದ್ದರೆ, ಈ ದೂತರು ಪ್ರಯಾಣಿಸಿದ ವೇಗವು ಅವರಿಗಿರುವ ಅಸ್ವಾಭಾವಿಕ ಗುಣಸ್ವಭಾವಗಳನ್ನು ಪುನಃ ದೃಢೀಕರಿಸುತ್ತದೆ.

ಸಾಯಂಕಾಲದಲ್ಲಿ, ದೂತರು ಬಂದು ಸೇರಿದ ವೇಳೆ, **ಲೋಟನು ಸೊದೋಮಿನ ಊರುಬಾಗಲಲ್ಲಿ ಕೂತುಕೊಂಡಿದ್ದ**ನ್ನು ಅವರು ಕಂಡರು. ಈ ದೃಶ್ಯವು ಈ ಹಿಂದೆ, ದೇವದೂತರು ಬಂದು ತಲುಪಿದ ವೇಳೆ ಅಬ್ರಹಾಮನು "ಗುಡಾರದ ಬಾಗಲಲ್ಲಿ ಕೂತಿದ್ದಕ್ಕೆ" ವಿರುದ್ಧ ಹೋಲಿಕೆಯಲ್ಲಿರುತ್ತದೆ (18:1). ಇಲ್ಲಿ ಬಳಸಿರುವ ಭಾಷೆಯು ಲೋಟನು ತನ್ನ ಗತಕಾಲದ ಅಲೆಮಾರಿ ಜೀವನಶೈಲಿಯನ್ನು ಬಿಟ್ಟು ಅದರ ಬದಲಾಗಿ ನಗರ ಜೀವನಶೈಲಿಯನ್ನು ನಡಿಸುತ್ತಿದ್ದನೆಂಬುದಾಗಿ ವಾಚಕನಿಗೆ ನೆನಪಿಸುವದಾಗಿದೆ. ಅಬ್ರಹಾಮನಿಂದ ಬೇರ್ಪಟ್ಟ ಬಳಿಕ, ಆತನು "ಗುಡಾರ ಹಾಕಿಸಿ ವಸತಿ ಮಾಡುತ್ತಾ ಸೊದೋಮಿಗೆ ಬಂದು" ಸೇರಿದ್ದನು (13:12). ಸ್ವಲ್ಪ ಕಾಲದ ಬಳಿಕ, ಆತನು "ಸೊದೋಮಿನಲ್ಲಿ"

(14:12) ಒಂದು "ಮನೆ" ಮಾಡಿಕೊಂಡು ವಾಸವಿದ್ದನು (19:2).

ಇಲ್ಲಿ, ವಾಕ್ಯವು ಲೋಟನನ್ನು "ಊರುಬಾಗಲಲ್ಲಿ" ಕೂತಿದ್ದನೆಂದು ಬಣ್ಣಿಸುತ್ತದೆ. ಗೋಡೆಗಳನ್ನು ಹೊಂದಿದ್ದ ಪಟ್ಟಣದ ಬಾಗಲು ಪಟ್ಟಣದೊಳಗೆ ಸಾಗುವ ಮುಖ್ಯದ್ವಾರವಾಗಿತ್ತು. ಅದು ವ್ಯವಹಾರವು ನಡೆಯುವ (23:10), ನ್ಯಾಯಲಯದ ಪ್ರಕರಣಗಳನ್ನು ಆಲಿಸಿ ತೀರ್ಪು ಕೊಡಲ್ಪಡುವ (34:20; ರೂತಳು 4:1, 11; 2 ಸಮುವೇಲ 15:2), ಮತ್ತು ಜನರು ಪರಸ್ಪರ ಭೇಟಿಯಾಗಿ, ಹರಟೆ ಮಾತಾಡುವ (ಕೀರ್ತನೆ 69:12), ಮತ್ತು ಕಳಕಳಿಯ ವಿಷಯಗಳನ್ನು ಕುರಿತು ಚರ್ಚಿಸುವಂಥ ಸಾಮಾನ್ಯ ಸ್ಥಳವಾಗಿತ್ತು. ಲೋಟನು ಏಕೆ ಬಾಗಲಲ್ಲಿ ಕೂತಿದ್ದನೆಂಬುದು ನಮಗೆ ತಿಳಿಸಲ್ಪಟ್ಟಿರುವದಿಲ್ಲ, ಆದರೆ ಕೆಲವರು ಅಭಿಪ್ರಾಯ ಪಟ್ಟಿರುವ ಪ್ರಕಾರವಾಗಿ ಆತನು ಖಂಡಿತವಾಗಿಯೂ ಪಟ್ಟಣದಲ್ಲಿ ಗೌರವಾನ್ವಿತ ರಾಜಕಾರಣಿಗಳೊಳಗೆ ಒಬ್ಬನಂತೂ ಆಗಿರಲಿಲ್ಲ. ಪಟ್ಟಣದಲ್ಲಿ ನಾಗರೀಕರು ಆತನನ್ನು "ಯಾರೋ ಒಬ್ಬ ಪರದೇಶಿ" ಎಂಬಂತೆ ಕಾಣುತ್ತಿದ್ದರೆಂಬುದಾಗಿ 9ನೇ ವಚನವು ತಿಳಿಸುತ್ತದೆ. ಲೋಟನು ಏಕೆ ಬಾಗಲಲ್ಲಿ ಕೂತಿದ್ದನೆಂಬುದನ್ನು ವಾಕ್ಯವು ತಿಳಿಸುವದಿಲ್ಲವಾದ್ದರಿಂದ, ಅದು ಊಹಾಪೋಹದ ಸಂಗತಿಯಾಗಿ ಉಳಿಯುತ್ತದೆ.

**ಲೋಟನು** ಕಣ್ಣೆತ್ತಿ ನೋಡಿದಾಗ ಇಬ್ಬರು ವ್ಯಕ್ತಿಗಳು ಸಮೀಪ ಬರುತ್ತಿರುವದನ್ನು ಕಂಡು **ಎದ್ದು ಎದುರುಗೊಂಡು ಬೊಗ್ಗಿ ನಮಸ್ಕರಿಸಿದನು**. ಲೋಟನ ಕ್ರಿಯೆಯು ಪ್ರಶಂಸನೀಯ ಯಾಕೆಂದರೆ ಆತನು ಅಪರಿಚಿತರನ್ನು ಗುರುತಿಸಿದನು, ಆದರೆ ಬೇರೆಯವರು ಅವರನ್ನು ಗುರುತಿಸಲಿಲ್ಲವೆಂದು ಸ್ಪಷ್ಟವಾಗುತ್ತದೆ. ಅದರ ಜೊತೆಗೆ, ಅಬ್ರಹಾಮನು ಮಾಡಿದ ರೀತಿಯಲ್ಲಿಯೇ (18:2), ಅವರ ಮುಂದೆ ಬೊಗ್ಗಿ ನಮಸ್ಕರಿಸಿ ಸೌಜನ್ಯದಿಂದ ಸ್ವಾಗತಿಸಿದವನು ಈತನೊಬ್ಬನೇ ಆಗಿದ್ದನು.

**ವಚನ 2.** ಲೋಟನು ನೆಲದಿಂದ ಮೇಲಕ್ಕೆ ಏಳುತ್ತಿದ್ದ ಹಾಗೆ, ಅವರನ್ನು **ಸ್ವಾಮಿಗಳೇ** ಎಂದು ಕರೆಯುವ ಮೂಲಕ ತಾನು ವ್ಯತ್ಯಾಸವಾದವನೆಂಬುದನ್ನು ಪುನಃ ತೋರಿಸಿ ಕೊಟ್ಟನು (ನೋಡಿರಿ 18:3). ಆತನು ಅವರಿಗೆ ಮತ್ತಷ್ಟು ಗೌರವವನ್ನು ತೋರಿಸುವವನಾಗಿ [ತನ್ನ] **ಮನೆಗೆ ಬಂದು ಇಳುಕೊಂಡು** ಇರಬೇಕೆಂದು ಮನವಿ ಮಾಡಿಕೊಂಡನು. ಈ ಅತಿಥಿ ಸತ್ಕಾರ ಮೂಲಕವಾಗಿ, ಅವರು ತಮ್ಮ **ಕಾಲುಗಳನ್ನು ತೊಳಕೊಳ್ಳ**ಲು ಸಾಧ್ಯವಾಗುತ್ತಿತ್ತು (ನೋಡಿರಿ 18:4) ಮತ್ತು **ರಾತ್ರಿಯನ್ನು ಕಳೆಯಲು** ಸಾಧ್ಯವಾಗುತ್ತಿತ್ತು; ಮತ್ತು ಮರುದಿನ ಬೆಳಿಗ್ಗೆ ಅವರು ತಮ್ಮ ಪ್ರಯಾಣವನ್ನು ಮುಂದುವರೆಸಬಹುದಿತ್ತು.

ಪ್ರಾಚೀನ ಪದ್ಧತಿಯು ಒಬ್ಬನು ಅತಿಥಿಗಳಿಗೆ ರಾತ್ರಿಯಲ್ಲಿ ಮಲಗುವದಕ್ಕೆ ಹಾಸಿಗೆಯೊಂದನ್ನು ಕೊಡಬೇಕೆಂದು ಹೇಳುವದಾಗಿದ್ದಲ್ಲಿ, ಅಂತಹ ಸತ್ಕಾರವನ್ನು ತಿರಸ್ಕರಿಸಿದರೆ ಅದು ಆತಿಥ್ಯಕಾರನನ್ನು ಅವಮಾನಿಸದಂತೆ ಆಗುತ್ತಿತ್ತು. ಆದದರಿಂದ, ಆರಂಭದಲ್ಲಿ ಅಪರಿಚಿತರು ಆತನ ಸಹಾಯವನ್ನು ನಿರಾಕರಿಸಿದಾಗ ಲೋಟನಿಗೆ ಒಂದು ವಿಧದಲ್ಲಿ ಆಘಾತವಾಗಿರಬಹುದು, ತಾವು ಅದರ ಬದಲಾಗಿ [ಪಟ್ಟಣದ] **ಬೀದಿಯಲ್ಲೇ ರಾತ್ರಿ ಕಳೆಯುತ್ತೇವೆ** ಎಂದು ಹೇಳಿದ್ದರು. "ಬೀದಿ" ಎಂಬುದು ಪಟ್ಟಣದ ದ್ವಾರದ ಬಳಿಯಲ್ಲಿರುವ ಒಂದು ಬೃಹತ್ ತೆರೆದ ಮೈದಾನವಾಗಿತ್ತು (2 ಪೂರ್ವಕಾಲವೃತ್ತಾಂತ 32:6; ನೆಹಮೀಯ 8:1; ಎಸ್ತೇರಳು 4:6). ಸಹಜವಾದ ಪರಿಸ್ಥಿತಿಗಳಲ್ಲಿ, ಸುರಕ್ಷತೆಯಿಲ್ಲದ ತೆರೆದ ಮೈದಾನದಲ್ಲಿ ರಾತ್ರಿಯನ್ನು ಕಳೆಯುವದರ ಬದಲಾಗಿ ಯಾರಾದರೊಬ್ಬರ ಮನೆಯಲ್ಲಿ ಕಳೆಯುವದೇ ಉತ್ತಮವೆಂದು ಭಾವಿಸಲಾಗುತ್ತಿತ್ತು (ನ್ಯಾಯಸ್ಥಾಪಕರು 19:20-26).

**ವಚನ 3.** ಲೋಟನು ತನ್ನ ಆಮಂತ್ರಣವನ್ನು ಸ್ವೀಕರಿಸುವಂತೆ ಒತ್ತಾಯಿಸುವದನ್ನು

ಮುಂದುವರೆಸಿದ್ದನು, ರಾತ್ರಿಯಲ್ಲಿ ಪರದೇಶಿಯರಿಗೆ ಏನು ಸಂಭವಿಸಬಹುದೋ ಎಂದು ಹೆದರಿದವನಾಗಿದ್ದರಿಂದ, ತನ್ನ ಆತಿಥ್ಯವನ್ನು ಸ್ವೀಕರಿಸಿ ರಾತ್ರಿಯಲ್ಲಿ ಆತನ ಮನೆಯೊಳಗೆ ಇಳಿದುಕೊಳ್ಳಬೇಕೆಂದು **ಅವರನ್ನು ಬಹಳ ಬಲವಂತಮಾಡಿದನು**. ಲೋಟನು ನಿರಂತರವಾಗಿ ಬಲವಂತಪಡಿಸಿದ್ದರಿಂದ ಅವರ ಹೊರಗಡೆಯಲ್ಲಿ ಉಳಿದುಕೊಳ್ಳಬೇಕೆಂಬ ತಮ್ಮ ಮೂಲ ಯೋಜನೆಯನ್ನು ಕೈ ಬಿಟ್ಟರು, ಆದ್ದರಿಂದ ಅವರು ಅವನ **ಮನೆಗೆ ಬಂದರು.** ಅವರು ಒಳಗೆ ಸೇರಿದ ಬಳಿಕ, ಲೋಟನು **ಹುಳಿಯಿಲ್ಲದ ರೊಟ್ಟಿಗಳನ್ನು ಸುಡಿಸಿ ಔತಣವನ್ನು ಮಾಡಿ**ಸಿದನು.

ಕೆಲವರು ಇದನ್ನು ಕೇವಲ ಹುಳಿಯಿಲ್ಲದ ರೊಟ್ಟಿಗಳನ್ನೊಳಗೊಂಡ ಒಂದು ಸಾಧಾರಣ ಊಟವಾಗಿತ್ತೆಂದು ಭಾವಿಸುತ್ತಾರೆ, ಯಾಕೆಂದರೆ ಅಲ್ಲಿ ಹುಳಿಯಿಲ್ಲದ ರೊಟ್ಟಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿರುತ್ತದೆ. ಹೇಗೂ, ಕೆಲವೊಂದು ಚಿಕ್ಕ ಹುಳಿಯಿಲ್ಲದ ರೊಟ್ಟಿಗಳನ್ನು ಒಂದು "ಔತಣ" (מִשְׁתֶּה, *ಮಿಸ್ಥೆಹ)* ಎಂಬುದಾಗಿ ಪ್ರಸ್ತಾಪಿಸಿರುವ ಸಾಧ್ಯತೆಯು ಅತ್ಯಂಥ ಕಡಿಮೆಯಿರುತ್ತದೆ. ಸಾಮಾನ್ಯವಾಗಿ, *ಮಿಸ್ಥೆಹ* ಎಂಬುದು ಹಬ್ಬದ ಔತಣವೊಂದನ್ನು ಸೂಚಿಸುತ್ತದೆ - ಮದುವೆಯಲ್ಲಿರುವ ಒಂದು ಔತಣ (29:22), ಅದು ರಾಜರಿಗೆ ಯೋಗ್ಯವಾದಂಥ ಭೋಜನ (1 ಸಮುವೇಲ 25:36), ಅಥವಾ ಒಬ್ಬ ರಾಜನಿಗೆ ಅಥವಾ ರಾಜನು ತನ್ನ ಮನೆಯಲ್ಲಿರುವ ಗಣ್ಯ ಅತಿಥಿಗಳಿಗೆ ನೀಡುವ ಒಂದು ರಾತ್ರಿಯ ಭೋಜನದ ರೀತಿಯಾಗಿರುತ್ತದೆ (ಎಸ್ತೇರಳು 2:18; 5:14).[1]

**ವಚನ 4.** ಸಾಧಾರಣವಾಗಿ, ರಾತ್ರಿಯ ಊಟದ ಬಳಿಕ, ಊಟ ಮಾಡಿದವರು ನಿದ್ರೆ ಮಾಡಲು ಹೋಗುತ್ತಾರೆ. ಹೇಗೂ, ಈ ಸಂದರ್ಭದಲ್ಲಿ, **ಅವರು ಮಲಗುವದಕ್ಕಿಂತ ಮುಂಚೆ** ಪಟ್ಟಣದವರು ಬಂದು ಅವರ ಮನೆಯವರಿಗೆ ತೊಂದರೆಯನ್ನುಂಟು ಮಾಡಿದರು. ದೇವದೂತರಿಗೆ ಈಗ **ಸೊದೋಮಿನ** ಜನರು ಹೇಗಿದ್ದಾರೆಂಬುದನ್ನು ಸ್ವಲ್ಪ ಹೊತ್ತಿನಲ್ಲಿ ಕಂಡುಕೊಳ್ಳಲಿದ್ದರು. **ಹುಡುಗರು ಮುದುಕರು ಸಹಿತವಾಗಿ ...** ಪಟ್ಟಣದ ಪ್ರತಿಯೊಂದು ಮೂಲೆಯಿಂದ ಜನರು ಬಂದು **ಒಗ್ಗಟ್ಟಾಗಿ ಮನೆಯನ್ನು ಸುತ್ತಿಕೊಂಡರು**. ಎಲ್ಲರನ್ನು ಒಳಗೊಂಡ ಭಾಷೆಯು ಇಡೀ ಪಟ್ಟಣವು ಭ್ರಷ್ಟಗೊಂಡಿದೆ ಎಂಬುದನ್ನು ಒತ್ತಿ ಹೇಳುತ್ತದೆ; ಖಂಡಿತವಾಗಿಯೂ **ಪಟ್ಟಣದವರೆಲ್ಲರೂ** ತಮ್ಮ ಮೇಲೆ ಬರಲಿದ್ದ ನ್ಯಾಯತೀರ್ಪಿಗೆ ಅರ್ಹರಾಗಿದ್ದರು. ಹೇಗೂ, ಲೋಟನ ಅಳಿಯರು ಅವರೊಳಗೆ ಒಬ್ಬರಾಗಿರಲಿಲ್ಲ ಎಂದು ತೋರುತ್ತದೆ (ನೋಡಿರಿ 19:14).

**ವಚನ 5.** ಈ ವಿವಿಧ ಜನರನ್ನೊಳಗೊಂಡ ಗುಂಪು ಆ ರಾತ್ರಿ ಬಂದಿದ್ದ **ಮನುಷ್ಯರು** ಎಲ್ಲಿ ಎಂದು ತಿಳಿಸು ಎಂಬುದಾಗಿ **ಲೋಟನಿಗೆ** ಒತ್ತಾಯಿಸಿದರು. ಅಷ್ಟುಮಾತ್ರವಲ್ಲದೆ, **ಅವರನ್ನು ಹೊರಕ್ಕೆ ತೆಗೆದುಕೊಂಡು ಬಾ; ಅವರೊಡನೆ ನಮಗೆ ಸಂಗಮವಾಗಬೇಕೆಂದು** ಬೇಡಿಕೆ ಇಟ್ಟರು. "ಸಂಗಮವಾಗಬೇಕು" ಎಂಬುದನ್ನು ಅನುವಾದಿಸಿರುವ ಪದವು (יָדַע, *ಯಾಡಾ*) ಅಕ್ಷರಶಃ "ತಿಳಿಯಬೇಕು" ಎಂದರ್ಥವನ್ನು ಕೊಡುತ್ತದೆ. ಕೆಲವರು ಸೊದೋಮಿನ ಪ್ರಜೆಗಳಿಗೆ ಯಾವದೇ ದುರಾಲೋಚನೆಗಳಿರಲಿಲ್ಲ, ಆದರೆ ಈ ಅಪರಿಚಿತರನ್ನು ಪರಿಚಯ ಮಾಡಿಕೊಳ್ಳಲು ಬಯಸಿದ್ದರಷ್ಟೇ ಎಂಬುದಾಗಿ ವಾದ ಮಾಡಿರುತ್ತಾರೆ. ಈ ಅಭಿಪ್ರಾಯವು *ಯಾಡಾ* ಎಂಬುದನ್ನು "ತಿಳಿದುಕೋ" ಎಂಬ ಅರ್ಥವಿರುವ γινώσκω (*ಗಿನೋಸ್ಕೋ*) ಎಂಬುದರ ಬದಲಾಗಿ, "ಭೇಟಿಯಾಗು" ಅಥವಾ "ಅವರೊಂದಿಗೆ ಸಂಭಾಷಿಸು" ಎಂದು ಅರ್ಥ ಬರುವಂಥ συγγινώσκω (*ಸುಂಗಿನೋಸ್ಕೋ*) ಎಂಬುದಾಗಿರುವ LXXನ ಅನುವಾದವನ್ನು ಜ್ಞಾಪಿಸುತ್ತದೆ.[2] ಹೇಗೂ, 19:5 ಮತ್ತು ನ್ಯಾಯಸ್ಥಾಪಕ 19:22ರಲ್ಲಿ, *ಯಾಡಾ* ಎಂಬ ಪದದ ಅರ್ಥವು "ಒಬ್ಬ ವ್ಯಕ್ತಿಯನ್ನು ಪ್ರಾಕೃತವಾಗಿ ತಿಳಿದುಕೋ ... (ಸಲಿಂಗವಾಗಿ)" ಎಂದಾಗಿರುತ್ತದೆ.[3] ಇನ್ನಿತರ ಅನುವಾದಗಳೆಂದರೆ "ಅವರೊಂದಿಗೆ ಲೈಂಗಿಕ ಸಂಬಂಧವಿಟ್ಟುಕೊಳ್ಳಬೇಕು" (NIV;

TEV; CEV; NLT) ಮತ್ತು "ಅವರೊಂದಿಗೆ ಸಂಭೋಗ ನಡಿಸಬೇಕು" (NJB; NEB; REB).

ಕೀಳುಮಟ್ಟಕ್ಕೆ ಸಾಗುವ ಕೆಟ್ಟತನವು ಎಷ್ಟೊಂದು ವ್ಯಾಪಕವಾಗಿತ್ತೆಂದರೆ ಸೊದೋಮಿನವರಲ್ಲಿ ಹುಡುಗರಿಂದ ಮುದುಕರ ವರೆಗೂ ಎಲ್ಲರು "ತಾವು ಸಲಿಂಗಕಾಮದ ಸಂಭೋಗದಲ್ಲಿ ತೊಡಗಿಸಿಕೊಳ್ಳುವಂತೆ"[4] ಆ ಪರದೇಶಿಗಳನ್ನು ಹೊರಗೆ ಕರೆದುಕೊಂಡು ಬರಬೇಕೆಂದು ಬೇಡಿಕೆ ಇಟ್ಟರು. ಇಲ್ಲಿ, ಮೊಟ್ಟಮೊದಲ ಬಾರಿಗೆ, 13:13ರಲ್ಲಿ ವ್ಯಕ್ತಪಡಿಸಲಾದ ಸೊದೋಮಿನವರ ಕೆಟ್ಟತನವು ಈಗ ಪೂರ್ಣವಾಗಿ ಬಯಲುಗೊಳಿಸಲ್ಪಟ್ಟಿತು. ದೇವರ ಜನರು ಅಂಥ ಕೃತ್ಯಗಳನ್ನು ಅನುಮೋದಿಸಬಾರದು ಅಥವಾ ಅವುಗಳಲ್ಲಿ ತೊಡಗಿಸಿಕೊಳ್ಳಬಾರದು (ಯಾಜಕಕಾಂಡ 18:22; 20:13; ರೋಮಾ 1:24-27 32; 1 ಕೊರಿಂಥ 6:9-11; 1 ತಿಮೊಥೆ 1:8-11; ಯೂದನು 7). ಸೊದೋಮಿನ ನಾಗರಿಕರಿಂದ ನಿಶ್ಚಯವಾಗಿಯೂ ಇನ್ನು ಅನೇಕ ದುಷ್ಕೃತ್ಯಗಳು ಮತ್ತು ಅಪರಾಧಗಳು ನಡಿಸಲ್ಪಟ್ಟಿರುವ ಸಾಧ್ಯತೆಯಿದೆ (ಯೆರೆಮೀಯ 23:14; ಯೆಹೆಜ್ಕೇಲ 16:46-50), ಆದರೆ ಇಡೀ ಸಮಾಜವು ಅಷ್ಟೊಂದು ಮುಚ್ಚುಮರೆಯಿಲ್ಲದೆ ವ್ಯಾಪಕವಾಗಿ ಸಲಿಂಗಕಾಮದಲ್ಲಿ ತೊಡಗಿಸಿಕೊಳ್ಳುವಷ್ಟು ವಿಕೃತಗೊಂಡಿದ್ದೇ ಅಂತಿಮವಾಗಿ ಅವರ ಮೇಲೆ ದೇವರ ಕೋಪಾಗ್ನಿಯು ಸುರಿಸಲ್ಪಡುವದಕ್ಕೆ ಕಾರಣವಾಗಿತ್ತು.

**ವಚನಗಳು 6, 7.** ಬಿಕ್ಕಟ್ಟಿನ ಸಂದರ್ಭದಲ್ಲಿ, **ಲೋಟನು** ಮಧ್ಯಸ್ಥನಾದನು ಮತ್ತು **ಅವರ ಬಳಿಗೆ ಹೊರಕ್ಕೆ ಬಂದು** ಮಾತಾಡಲು ಬಹಳ ಧೈರ್ಯವನ್ನು ತೋರ್ಪಡಿಸಿದನು. ಅವನು **ತನ್ನ ಹಿಂದೆ ಕದಹಾಕಿ**ದನು ಎಂದು ವಾಕ್ಯವು ತಿಳಿಸುತ್ತದೆ, ತನ್ನ ಅತಿಥಿಗಳನ್ನು ಕಾಪಾಡುವ ನಿರೀಕ್ಷೆಯೊಂದಿಗೆ ಅವರ ಕೋಪಾಗ್ನಿಯನ್ನು ಎದುರಿಸುವ ಅಪಾಯಕ್ಕೆ ಒಳಪಡಿಸಿಕೊಂಡನು. ಬಳಿಕ ಆತನು ಅವರನ್ನು ಬೇಡಿಕೊಳ್ಳುವವನಾಗಿ, ಹೀಗೆ ಹೇಳಿದನು, **ಅಣ್ಣಂದಿರೇ, ಈ ಪಾತಕವನ್ನು ಮಾಡಬೇಡಿರಿ. ಕೇಳಿರಿ** "ಅಣ್ಣಂದಿರೇ" ಎಂಬುದು ಅಕ್ಷರಶಃ ಇಬ್ರಿಯ ಪದವಾದ אַחַי (*ಅಚಾಯ*) ಎಂಬುದರ ಅನುವಾದವಾಗಿರುತ್ತದೆ, ಆದರೆ ಇಲ್ಲಿ ಅವರು ವಾಸ್ತವಿಕದಲ್ಲಿ ರಕ್ತಸಂಬಂಧದಲ್ಲಿ ಸಹೋದರರಾಗಿದ್ದರೆಂದು ಸೂಚಿಸುವದಿಲ್ಲ. ಬದಲಾಗಿ, ಅದನ್ನು "ನನ್ನ ಸ್ನೇಹಿತರೇ" (NIV) ಎಂಬುದಾಗಿ ಅರ್ಥಮಾಡಿಕೊಳ್ಳತಕ್ಕದ್ದು, ಆತನು ಅವರೊಂದಿಗೆ ಐಕ್ಯತೆಯುಳ್ಳ ಆಪ್ತ ಸಂಬಂಧವಿರುವದಾಗಿ ಗುರುತಿಸಿಕೊಂಡನೆಂಬುದನ್ನು ತೋರಿಸುತ್ತದೆ. ಇದರಲ್ಲಿರುವ ದುರಂತಕರವಾದ ವಿಪರ್ಯಾಸವು ಏನೆಂದರೆ, ಅನೇಕ ವರ್ಷಗಳಿಗೆ ಮುಂಚೆ, ಅಬ್ರಹಾಮನು ಲೋಟನನ್ನು ತನ್ನ "ಸಹೋದರ" (13:8) ಎಂದು ಕರೆದನು. ದೇವರ ಆಶೀರ್ವಾದಗಳಲ್ಲಿ ಜೀವಿಸುತ್ತಿದ್ದ ಆತನ ದೊಡ್ಡಪ್ಪನಿಂದ ಬೇರ್ಪಟ್ಟ ಬಳಿಕ, ಲೋಟನು ಸ್ವಲ್ಪ ಕಾಲದಲ್ಲಿಯೇ ದೈವಿಕ ಕೋಪಾಗ್ನಿಯು ಬೀಳಲಿದ್ದ ಈ ದುಷ್ಟ ಜನರಿಗೆ ಒಬ್ಬ "ಸಹೋದರ"ನಾಗಿ ಮಾರ್ಪಟ್ಟಿದ್ದನು.

**ವಚನ 8.** ಅಂಥ ಭ್ರಷ್ಟಗೊಂಡ ಸಮಾಜದಲ್ಲಿ ಅಷ್ಟೊಂದು ಕಾಲದಿಂದ ಜೀವಿಸುವ ಮೂಲಕವಾಗಿ ಲೋಟನ ಮನಸ್ಸಾಕ್ಷಿಯು ಎಷ್ಟೊಂದು ಕೀಳುತನಕ್ಕೆ ಇಳಿದಿತ್ತೆಂಬುದನ್ನು ದೃಷ್ಟಾಂತಪಡಿಸುವದಕ್ಕೆ, ಈಗ ಆತನು ದೊಂಬಿ ಎದ್ದಿರುವ ಜನರ ಗುಂಪಿಗೆ **ಪುರುಷರನ್ನರಿಯದ ಇಬ್ಬರು ಹೆಣ್ಣುಮಕ್ಕಳ**ನ್ನು ಒಪ್ಪಿಸುವೆನೆಂದು ಮುಂದೆ ಬಂದನು. "ಅರಿಯದ" ಎಂಬುದು 5ನೇ ವಚನದಲ್ಲಿ ಬಳಸಲಾಗಿರುವ ಅದೇ *ಯಾಡಾ* ("ತಿಳಿ") ಎಂಬ ಪದದಿಂದ ಬರುತ್ತದೆ, ಆದರೆ ಇಲ್ಲಿ ಅದು ಪುರುಷ/ಸ್ತ್ರೀ ಲೈಂಗಿಕ ಸಂಬಂಧಗಳನ್ನು ಸೂಚಿಸುತ್ತದೆ. ಇದರರ್ಥವು ಏನೆಂದರೆ, ವಾಕ್ಯವು ಪಟ್ಟಣದಲ್ಲಿರುವ ಇಬ್ಬರು ಯುವಕರನ್ನು ಲೋಟನ "ಅಳಿಯಂದಿರು" (19:14) ಎಂಬುದಾಗಿ ಸೂಚಿಸುತ್ತದಾದರೂ, ಅವರು ಗೊತ್ತು ಮಾಡಲ್ಪಟ್ಟಿದ್ದ

ಅಳಿಯಂದಿರಷ್ಟೇ ಆಗಿದ್ದರು; ಅವರು ಅವನ ಪುತ್ರಿಯರಿಗೆ ನಿಶ್ಚಿತಾರ್ಥಗೊಂಡವರು ಆಗಿದ್ದರು, ಆದರೆ ಮದುವೆಯು ಇನ್ನೂ ನಡೆದಿರಲಿಲ್ಲ (ನೋಡಿರಿ ಮತ್ತಾಯ 1:18-25).

ಲೋಟನು ತನ್ನ ಕನ್ಯೆಯರಾಗಿದ್ದ ಪುತ್ರಿಯರನ್ನು ಅಂತಹ ವಿಕೃತಗೊಂಡಿದ್ದ ಜನರ ಗುಂಪಿಗೆ ಒಪ್ಪಿಸುವೆನೆಂದು ಹೇಳಿದ್ದು ಹೆಚ್ಚುಕಡಿಮೆ ಗ್ರಹಿಸಲಾಗದ್ದಾಗಿದೆ. ಈ ಜನರು ಅವರೊಂದಿಗೆ **ಮನಸ್ಸು ಬಂದಂತೆ ಮಾಡಬಹುದು** ಎಂದು ಹೇಳಿದನು; ಅವರು ತಾನು ಆಶ್ರಯ ಕೊಟ್ಟಿರುವ ಆ **ಮನುಷ್ಯರಿಗೆ** ಮಾತ್ರ **ಏನೂ ಮಾಡಕೂಡದು** ಎಂದನು. ಕೆಲವರು ಲೋಟನ ವರ್ತನೆಯನ್ನು ಸಮರ್ಥಿಸುತ್ತಾರೆ ಯಾಕೆಂದರೆ ಪ್ರಾಚೀನ ಪದ್ಧತಿಯಂತೆ ಒಬ್ಬನ ಮನೆಯೊಳಗೆ ಬಂದಿರುವ ಅತಿಥಿಗಳ ಸುರಕ್ಷತೆಯ ಜವಾಬ್ದಾರಿಯು ಆ ವ್ಯಕ್ತಿಯದ್ದೇ ಆಗಿರುತ್ತಿತ್ತು; ಆದದರಿಂದ, ಆತನ ಭದ್ರತೆಯಲ್ಲಿರುವ ಅವರಿಗೆ ಏನಾದರೂ ಸಂಭವಿಸಿದ್ದಲ್ಲಿ, ಆತನನ್ನೇ ಅದಕ್ಕೆ ಹೊಣೆಗಾರನನ್ನಾಗಿ ಮಾಡಲಾಗುತ್ತಿತ್ತು. ಅಂಥ ಪದ್ಧತಿಯು ಖಂಡಿತವಾಗಿಯೂ ಲೋಟನು ಎದುರಿಸಿದಂಥ ಉಬಯಸಂಕಟವನ್ನು ಕಲ್ಪನೆ ಮಾಡಿಕೊಳ್ಳಲಿಲ್ಲ ಎಂದು ತೋರುತ್ತದೆ. ಆತನು ಆತಿಥ್ಯಕಾರನಾಗಿ ತನಗಿರುವ ಪಾತ್ರವನ್ನು ತನ್ನ ಪುತ್ರಿಯರ ಹಿತಕ್ಕಿಂತಲೂ ಹೆಚ್ಚು ಮೌಲ್ಯವೆಂದೆಣಿಸಿದನು. ಸಂಭಾವ್ಯವಾಗಿ, ಅಬ್ರಹಾಮನು ತನ್ನ ಸ್ವಂತ ಪ್ರಾಣವನ್ನು ಉಳಿಸಿಕೊಳ್ಳುವದಕ್ಕಾಗಿ ಐಗುಪ್ತದಲ್ಲಿ ತನ್ನ ಹೆಂಡತಿಯ ಸದ್ಗುಣಶೀಲತೆಯನ್ನೇ ತ್ಯಾಗ ಮಾಡುವದಕ್ಕೆ ಮನಸ್ಸುಳ್ಳವನಾಗಿದ್ದನೆಂಬುದನ್ನು ಈತನು ನೆನಪಿಸಿಕೊಂಡಿರಬಹುದು (ನೋಡಿರಿ 12:10-20). ಆತನು ತನ್ನ ಅತಿಥಿಗಳನ್ನು ರಕ್ಷಿಸುವದಕ್ಕೆ ಮತ್ತು ಸೊದೋಮಿನ ನಾಗರಿಕರನ್ನು ತೃಪ್ತಿ ಪಡಿಸುವದಕ್ಕೆ ಅದೇ ರೀತಿಯ ಕೃತ್ಯವನ್ನು ಮಾಡಲು ಮನಸ್ಸುಳ್ಳವನಾಗಿದ್ದನು.

ಯೆಹೋವನು ಲೋಟನ ದೊಡ್ಡಪ್ಪನ ಕೃತ್ಯಗಳಿಂದ ಸಂತೋಷ ಪಡಲಿಲ್ಲ ಮತ್ತು ಮತ್ತೊಬ್ಬನ ಹೆಂಡತಿಯನ್ನು ತನ್ನ ಉಪಪತ್ನಿಯರಲ್ಲಿ ಸೇರಿಸಿಕೊಂಡದ್ದಕ್ಕಾಗಿ ಫರೋಹನ ಮನೆಯವರ ಮೇಲೆ ಉಪದ್ರವಗಳನ್ನು ಬರಮಾಡಿದನು ಎಂಬುದನ್ನು ಈತನು ಮರೆತು ಹೋಗಿರುವಂತೆ ಕಾಣಿಸುತ್ತದೆ. ಬಹುಶಃ ಆತನು ಆ ಮುಂಚಿನ ಘಟನಾವಳಿಗಳಲ್ಲಿನ ಮುಖ್ಯ ಅಂಶವನ್ನು ಗಮನಿಸದೆ ಬಿಟ್ಟಿರಬಹುದಾಗಿದೆ, ಯಾಕೆಂದರೆ ಎಲ್ಲವೂ ಅನುಕೂಲಕರವಾಗಿ ಮಾರ್ಪಡುವಂತೆ ಕಾಣಿಸಿತ್ತು: ಅಬ್ರಹಾಮನು ತನ್ನ ಹೆಂಡತಿಯನ್ನು ಹಿಂದಕ್ಕೆ ಪಡೆದುಕೊಂಡನು, ಮತ್ತು ಫರೋಹನು ಆತನಿಗೆ ಪಶುಗಳನ್ನು ಹಾಗೂ ದಾಸರನ್ನು ಕೊಟ್ಟು ಸಮೃದ್ಧಿಗೊಳಿಸಿದನು. ಲೋಟನು ಕೀಳುಮಟ್ಟಕ್ಕೆ ಇಳಿದಿದ್ದ ಜನರ ಗುಂಪಿನ ಕೈಯಲ್ಲಿ ಸಾಮೂಹಿಕವಾಗಿ ಅತ್ಯಾಚಾರ ಮಾಡಿ ಲೈಂಗಿಕವಾಗಿ ದುರ್ಬಳಕೆ ಮಾಡುವಂತೆ ತನ್ನ ಪುತ್ರಿಯರನ್ನು ಒಪ್ಪಿಸುವದಕ್ಕೆ ಮನಸ್ಸುಳ್ಳವನಾಗಿದ್ದನೆಂಬುದು ಆತನ ಗುಣಸ್ವಭಾವಗಳಲ್ಲಿದ್ದ ಗಂಭೀರವಾದ ದೋಷಗಳನ್ನು ಎತ್ತಿ ತೋರಿಸುತ್ತದೆ. ಮೊದಲನೆಯದಾಗಿ, ಒಬ್ಬ ತಂದೆಯು ತನ್ನ ಪುತ್ರಿಯರ ಕಡೆಗೆ ಹೊಂದಿರಬೇಕೆಂದು ದೇವರು ಎದುರು ನೋಡುವಂಥ ನೈತಿಕ ಮತ್ತು ಆತ್ಮೀಕ ಆದ್ಯತೆಗಳಿಗೆ ಹೋಲಿಸಿದಾಗ ಈತನ ಆದ್ಯತೆಗಳು ತಲೆಕೆಳಗಾಗಿದ್ದವು. ಆತನು ವೈಯಕ್ತಿಕವಾಗಿ ಏನೇ ಬೆಲೆಯನ್ನು ತೆತ್ತಬೇಕಾಗಿ ಬಂದರೂ ಸರಿಯೇ, ಅವರಿಗೆ ಪ್ರೀತಿಯನ್ನು ಮತ್ತು ಭದ್ರತೆಯನ್ನು ಕೊಟ್ಟಿರಬೇಕಾಗಿತ್ತು. ಎರಡನೆಯದಾಗಿ, ಆತನು ತನ್ನ ಪುತ್ರಿಯರ ಶೀಲ ಮತ್ತು ಅವರ ಪ್ರಾಣಗಳಿಗಿಂತಲೂ ಸೊದೋಮಿನ ಭ್ರಷ್ಟಗೊಂಡ ಜನರ ಗೌರವಕ್ಕೆ ಹೆಚ್ಚು ಬೆಲೆಯನ್ನು ಕೊಟ್ಟನು. ಈ ವಿಧವಾದ ಲೈಂಗಿಕ ದುರುಪಯೋಗಕ್ಕೆ ಒಳಗಾದ ಮಹಿಳೆಯರು ಮಾನಸಿಕವಾಗಿ ಆಗಲಿ ಅಥವಾ ಶಾರೀರಿಕವಾಗಿ ಆಗಲಿ ಬದುಕುಳಿಯುವ ಸಂಭವವು ಇರುವದಿಲ್ಲ (ನೋಡಿರಿ ನ್ಯಾಯಸ್ಥಾಪಕ 19:22-30).

**ವಚನ 9.** ಸೊದೋಮಿನ ಜನರು ಲೋಟನಿಗೆ ಕಠೋರವಾಗಿ ಪ್ರತ್ಯುತ್ತರ ನೀಡಿದರು, ಅವನಿಗೆ **ದಾರಿ ಬಿಡು** ಎಂದು ಗದರಿದರು. ಅಷ್ಟು ಮಾತ್ರವಲ್ಲದೆ ಆತನು **ಯಾರೋ ಒಬ್ಬ ಪರದೇಶಿಯಾಗಿ ಬಂದು** ಲೆಕ್ಕಕ್ಕೆ ಇಲ್ಲದವನು ಎಂಬುದಾಗಿ ಅವನಿಗೆ ಇನ್ನಷ್ಟು ಅಗೌರವವನ್ನು ತೋರಿಸಿದರು, ಅಂದರೆ, ನಾಗರೀಕ ಹಕ್ಕು ಇಲ್ಲದ ಹೊರಗಿನ ವ್ಯಕ್ತಿ ಎಂದು ಹೇಳಿದರು. ಅಕ್ಷರಶಃ, ಆತನು "ಪ್ರವಾಸಿಯಾಗಿ ಬಂದವನು" (גּוּר, *ಗುರ)* ಎಂದು ವಾಕ್ಯವು ಹೇಳುತ್ತದೆ. ಅಬ್ರಹಾಮನು ಕಾನಾನಿನಲ್ಲಿದ್ದ ಕ್ಷಾಮದಿಂದ ತಪ್ಪಿಸಿಕೊಳ್ಳಲು ಸ್ವಲ್ಪ ಕಾಲ ಐಗುಪ್ತದಲ್ಲಿ ಉಳಿದುಕೊಂಡದ್ದನ್ನು ಬಣ್ಣಿಸುವದಕ್ಕೆ ಇದೇ ಕ್ರಿಯಾಪದವು ಬಳಸಲ್ಪಟ್ಟಿದೆ (12:10). ಒಂದು ಹೊರ ದೇಶದಲ್ಲಿ ಪರದೇಶಿಗಳಾಗಿ ವಾಸಿಸುವಿಕೆಯು ಶಾಶ್ವತ ಅಥವಾ ಕ್ಲುಪ್ತ ಕಾಲದ್ದಾಗಿರಬಹುದಾಗಿದೆ; ಆದರೆ ಇವರು ಆ ದೇಶದ ನಾಗರೀಕರಿಗೆ ರಕ್ತ ಸಂಬಂಧಿಗಳಾಗಿರದ ಕಾರಣ, ಅವರ ಹಿತಾಸಕ್ತಿಯು ಅವರ ಆತಿಥ್ಯಕಾರರ ಸೌಜನ್ಯಯುತವಾದ ಸತ್ಕಾರದ ಮೇಲೆ ಅವಲಂಬಿತವಾಗಿತ್ತು. ಅವರು ಅದೇ ಸ್ಥಳದಲ್ಲಿ ಹುಟ್ಟಿ ಬೆಳೆದ ಜನರಿಗಿರುವಂಥ ಎಲ್ಲಾ ಸವಲತ್ತುಗಳನ್ನು ಅನುಭವಿಸುತ್ತಿರಲಿಲ್ಲ, ಮತ್ತು ನಾಗರೀಕ ವಿಚಾರಗಳಲ್ಲಿ ತಮ್ಮ ಅಭಿಪ್ರಾಯವನ್ನು ಹೇಳುವ ಯಾವದೇ ಹಕ್ಕು ಅವರಿಗೆ ಇರಲಿಲ್ಲ.[5] ಈ ಕಾರಣಕ್ಕಾಗಿ, ಆ ಒರಟು ಜನರ ಗುಂಪು ಲೋಟನ ಮೇಲೆ ಅವನೊಬ್ಬ ಸ್ವನೀತಿಯುಳ್ಳ ಪರದೇಶಿಯಾಗಿದ್ದು ಅವರ ನಡವಳಿಕೆಯ ಕುರಿತು **ನ್ಯಾಯ ಹೇಳುವವನಾಗಿ** ವರ್ತಿಸುವ ಯಾವ ಹಕ್ಕು ಇರುವದಿಲ್ಲ ಎಂದು ಕಳಂಕ ಹೊರಿಸಿದರು (ನೋಡಿರಿ ವಿಮೋಚನಕಾಂಡ 2:14).

"ನ್ಯಾಯ ಹೇಳುವವನು" ಎಂಬುದಾಗಿ ಅನುವಾದಿಸಲ್ಪಟ್ಟಿರುವ ಪದವು שָׁפַט (*ಶಾಪಾಟ*), ಆದರೆ ಇದು ಈ ಸನ್ನಿವೇಶದಲ್ಲಿ ಒಂದು ನ್ಯಾಯಾಲಯದ ತೀರ್ಮಾನದ ಬಗ್ಗೆ ಉಲ್ಲೇಖವನ್ನು ಹೊಂದಿರುವದಿಲ್ಲ. ಬಹುಶಃ ಹೊರಗಿನಿಂದ ಬಂದವರ ಸಲಿಂಗ ಲೈಂಗಿಕವಾಗಿ ಅತ್ಯಾಚಾರ ಮಾಡುವದನ್ನು ನಿಷೇಧಿಸುವಂಥ ಯಾವ ಕಾನೂನು ಸೊದೋಮಿನಲ್ಲಿ ಇರಲಿಲ್ಲ ಎಂದು ತೋರುತ್ತದೆ. ಹೇಗೂ, *ಶಾಪಾಟ* ಎಂಬುದಕ್ಕಿರುವ ಇನ್ನೊಂದು ಅರ್ಥವು "ದೊರೆ"; ಮತ್ತು ಪ್ರಾಚೀನ ಜಗತ್ತಿನಲ್ಲಿ, ಸೊದೋಮಿನಂಥ ನಗ-ರಾಜ್ಯದ ದೊರೆಯು (ಅರಸನು) (ನೋಡಿರಿ 14:2, 17) ಅಲ್ಲಿನ ಜನರಿಗೆ ಅತ್ಯುನ್ನತ ನ್ಯಾಯಾಧಿಪತಿಯಾಗಿರುತ್ತಿದ್ದನು. NJPSV ತರ್ಜುಮೆಯು ಈ ವಾಕ್ಯಭಾಗದಲ್ಲಿ *ಶಾಪಾಟ* ಎಂಬುದಕ್ಕೆ ಒಂದು ಉತ್ತಮ ಅರ್ಥವನ್ನು ಒದಗಿಸುತ್ತಾನೆ, ಆತನು ಹೇಳುವದೇನೆಂದರೆ ಸೊದೋಮಿನ ನಿವಾಸಿಗಳು ಲೋಟನ ಮೇಲೆ ಕೋಪವನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳಿದರು, "ಇವನು ಇಷ್ಟು ಬೇಗನೇ ದೊರೆಯಂತೆ ವರ್ತಿಸುತ್ತಿದ್ದಾನಲ್ಲಾ!"

ಈ ಹೊರಗಿನ ವ್ಯಕ್ತಿಯು ತನ್ನ ಮನೆಗೆ ಬಂದಿರುವ ಪುರುಷರೊಂದಿಗೆ ಸಂಭೋಗ ನಡಿಸುವದಕ್ಕಿಂತಲೂ ತನ್ನ ಪುತ್ರಿಯರ ಸಂಗಡ ಸಂಭೋಗ ನಡಿಸುವದು ನೈತಿಕವಾಗಿ ಉತ್ತಮವೆಂದು ಹೇಳಿದ್ದಕ್ಕೆ ಅವನ ಮೇಲೆ ಸಿಟ್ಟುಗೊಂಡರು. ಆದದರಿಂದ, ಅವರು **ಆ ಮನುಷ್ಯರಿಗೆ ಕೇಡು ಮಾಡುವದಕ್ಕಿಂತ ಹೆಚ್ಚಾಗಿ ನಿನಗೇ ಕೇಡು ಮಾಡುತ್ತೇವೆ** ಎಂದು ಬೆದರಿಕೆ ಹಾಕಿದರು, ಅಂದರೆ, ಅವನ ಮನೆಯಲ್ಲಿರುವ ಅತಿಥಿಗಳಿಗೆ ಮಾಡಬೇಕೆಂದು ಯೋಜನೆ ಹಾಕಿಕೊಂಡಿದ್ದ ಲೈಂಗಿಕ ದುರುಪಯೋಗಕ್ಕಿಂತಲೂ ಹೆಚ್ಚಾಗಿ ಲೋಟನನ್ನು ಲೈಂಗಿಕವಾಗಿ ಪೀಡಿಸುವದಾಗಿತ್ತು. ಆ ಭಯಾನಕವಾದ ಕ್ಷಣದಲ್ಲಿ, **ಲೋಟನ ಮೇಲೆ ಬಿದ್ದು ಬಹಳವಾಗಿ ಇರುಕಿಸಿ** ಹೆಚ್ಚುಕಡಿಮೆ **ಕದವನ್ನು** ಒಡೆದು ಬಿಟ್ಟಿರುತ್ತಿದ್ದರು.

**ವಚನ 10.** ಜನರ ಗುಂಪು ಲೋಟನನ್ನು ತಳ್ಳಿಕೊಂಡು ಬಂದರು ಮತ್ತು ಆತನ ಮನೆಯ ಬಾಗಲು ಇನ್ನು ಸ್ವಲ್ಪದರಲ್ಲಿಯೇ ಮುರಿದು ಹೋಗಲಿತ್ತು, **ಒಳಗಿದ್ದ ಆ ಮನುಷ್ಯರು** ರಕ್ಷಣೆಗೆ

ಧಾವಿಸಿ **ಕೈಚಾಚಿ ಲೋಟನನ್ನು ತಮ್ಮ ಕಡೆಗೆ ಮನೆಯೊಳಗೆ** ಸುರಕ್ಷಿತವಾಗಿ **ಸೇರಿಸಿ ಕದಮುಚ್ಚಿದರು**.

**ವಚನ 11.** ಬಳಿಕ ಅವರು ಬಾಗಲನ್ನು ಮುರಿಯುವದಕ್ಕೆ ಪ್ರಯತ್ನಿಸುತ್ತಿದ್ದ **ಮನುಷ್ಯರಿಗೆ ಚಿಕ್ಕವರಿಗೂ ದೊಡ್ಡವರಿಗೂ ಕೂಡ ಕಣ್ಣು ಮೊಬ್ಬಾಗುವಂತೆ ಮಾಡಿದರು**. "ಕಣ್ಣು ಮೊಬ್ಬಾಗುವಂತೆ" ಎಂಬುದಕ್ಕಾಗಿ ಬಳಸಿರುವ ಪದವು ಸಾಮಾನ್ಯವಾಗಿ ಬಳಸುವ עִוֵּר *(ಇವ್ವೆರ)* ಎಂಬ ಪದವಲ್ಲ, ಆದರೆ סַנְוֵרִים *(ಸನ್ವೆರಿಮ್)* ಎಂಬ ಪದವಾಗಿದೆ, ಇದು ಇದೇ ರೀತಿಯ ಇನ್ನು ಒಂದೇ ಒಂದು ಹಳೆಯ ಒಡಂಬಡಿಕೆ ಸನ್ನಿವೇಶದಲ್ಲಿ ಬಳಸಲ್ಪಟ್ಟಿರುತ್ತದೆ (2 ಅರಸು 6:18). ಇದು "ಅಕ್ಕಾದಿಯನ್ ಸಜಾತಿಯ ಮೂಲಪದದಿಂದ ಎರವಲು ಪಡೆದ ಒಂದು ಪದವಾಗಿದೆ,"[6] ಮತ್ತು ಇದು ಸಮರ್ಪಕವಾಗಿ ಕ್ರಿಯೆ ಮಾಡುವದಕ್ಕೆ ಅಶಕ್ತರನ್ನಾಗಿಸುವ ಹಾಗೆ ಜನರನ್ನು ತಾತ್ಕಾಲಿಕವಾಗಿ ಕುರುಡುಗೊಳಿಸುವ ಅತಿ ಕಣ್ಣು ಕುಕ್ಕುವ ಬೆಳಕು ಅಥವಾ ಹೊಳಪನ್ನು ಸೂಚಿಸುತ್ತದೆ. ಕುರುಡಾದ ಜನರು ಅಲ್ಲಲ್ಲಿ ಎಡವುತ್ತಾ, **ಬಾಗಿಲು ಯಾವದೆಂದು** ಎಷ್ಟೇ ಹುಡುಕಾಡಿದರೂ ಯಶಸ್ವಿಗೊಳ್ಳಲಿಲ್ಲ. ವಿಪರ್ಯಾಸವೇನೆಂದರೆ, ಈ ಸೊದೋಮಿನ ಜನರು ಲೋಟನ ಮನೆಯೊಳಗಿದ್ದ ಪುರುಷರನ್ನು "ಅರಿಯಬೇಕು" ಎಂದು ಬಯಸಿದ್ದರು ಆದರೆ ಈಗ ಅವರು ಒಳಗೆ ಹೋಗುವದಕ್ಕೆ ಸಾಧ್ಯವಾಗುವಂತೆ ಬಾಗಿಲು ಎಲ್ಲಿ ಎಂಬುದನ್ನು ಸಹ ಅರಿಯದೆ ಇದ್ದಾರೆ.

## ಕರ್ತನ ಕನಿಕರವು ತೋರ್ಪಡಿಸಲ್ಪಟ್ಟಿದ್ದು: ಲೋಟನನ್ನು ತಪ್ಪಿಸಿ ಕಾಪಾಡಿದ್ದು (19:12-22)

### ಲೋಟನು ತನ್ನ ಅಳಿಯಂದಿರನ್ನು ಎಚ್ಚರಿಸಿದ್ದು (19:12-14)

**[12]ಆಗ ಆ ದೂತರು ಲೋಟನಿಗೆ - ಇಲ್ಲಿ ನಿನಗೆ ಇನ್ನಾರಿದ್ದಾರೆ? ಅಳಿಯಂದಿರನ್ನೂ ಗಂಡು ಹೆಣ್ಣು ಮಕ್ಕಳನ್ನೂ ಪಟ್ಟಣದಲ್ಲಿ ನಿನಗಿರುವ ಬೇರೆ ಎಲ್ಲರನ್ನೂ ಊರಹೊರಕ್ಕೆ ಕರೆದುಕೊಂಡು ಬಾ. [13]ನಾವು ಈ ಸ್ಥಳವನ್ನು ನಾಶಮಾಡುವದಕ್ಕೆ ಬಂದವರು. ಇಲ್ಲಿಯವರ ವಿಷಯವಾಗಿ ಬಲು ದೊಡ್ಡ ಮೊರೆಯು ಯೆಹೋವನಿಗೆ ಮುಟ್ಟಿದ್ದರಿಂದ ಇವರನ್ನು ನಾಶಮಾಡುವದಕ್ಕಾಗಿ ಆತನು ನಮ್ಮನ್ನು ಕಳುಹಿಸಿದ್ದಾನೆ ಎಂದು ಹೇಳಿದರು. [14]ಆಗ ಲೋಟನು ಹೊರಕ್ಕೆ ಹೋಗಿ ತನ್ನ ಹೆಣ್ಣು ಮಕ್ಕಳನ್ನು ಗೊತ್ತುಮಾಡಿಕೊಂಡಿದ್ದ ಅಳಿಯಂದಿರಿಗೆ ಈ ಸಂಗತಿಯನ್ನು ತಿಳಿಸಿ - ನೀವೆದ್ದು ಈ ಸ್ಥಳವನ್ನು ಬಿಟ್ಟು ಹೋಗಿರಿ, ಯೆಹೋವನು ಈ ಊರನ್ನು ನಾಶಮಾಡುತ್ತಾನೆ ಎಂದು ಹೇಳಿದನು. ಆದರೆ ಅವನು ಅವರಿಗೆ ಗೇಲಿಮಾಡುವವನಾಗಿ ಕಾಣಿಸಿದನು.**

**ವಚನಗಳು 12, 13.** ದೂತರು **ಲೋಟನಿಗೆ** ಬೇರೆ ಸಂಬಂಧಿಗಳು – **ಅಳಿಯಂದಿರು, ಗಂಡು ಹೆಣ್ಣು ಮಕ್ಕಳು** ಅಥವಾ ಬೇರೆ ಯಾವದೇ ಕುಟುಂಬ ಸದಸ್ಯರು ನಿನಗೆ ಇದ್ದಾರೋ ಎಂದು ಕೇಳಿದರು. ಮೇಲ್ಗಡೆಯಲ್ಲಿ ನೋಡುವದಾದರೆ, ದೈವಿಕ ಜೀವಿಗಳಿಗೆ ಲೋಟನ ಕುಟುಂಬದವರ ಸಂಖ್ಯೆಯನ್ನಾಗಲಿ ಮತ್ತು ಲಿಂಗವನ್ನಾಗಲಿ ತಿಳಿದಿರಲಿಲ್ಲ ಎಂಬುದು ವಿಚಿತ್ರವೆಂದು ಅನ್ನಿಸುತ್ತದೆ. ಒಂದೋ ಯೆಹೋವನು ಈ ಮಾಹಿತಿಯನ್ನು ಅವರಿಗೆ ತಿಳಿಯಪಡಿಸದೆ ಇದ್ದಿರಬಹುದು, ಅಥವಾ ಅದನ್ನು ಕಂಡುಕೊಳ್ಳುವದಕ್ಕೆ ಅವರು ತಮ್ಮ ಅಸ್ವಾಭಾವಿಕ ಶಕ್ತಿಯನ್ನು ಬಳಸಿರಲಿಲ್ಲ ಎಂದಾಗುತ್ತದೆ.

ಈ ಮುಂಚೆ ತಿಳಿಸಿರುವ ಪ್ರಕಾರ, "ಅಳಿಯಂದಿರು" ಎಂಬುದು ಆಧುನಿಕ ಪಾಶ್ಚಾತ್ಯ

ಸಂಸ್ಕೃತಿಯ ಪ್ರಕಾರವಾಗಿ ಇದು ಈ ಯುವಕರನ್ನು ಬಣ್ಣಿಸುವ ನಿಖರವಾದ ಪದವಾಗಿರುವದಿಲ್ಲ, ಯಾಕೆಂದರೆ ಲೋಟನ ಇಬ್ಬರು ಪುತ್ರಿಯರು ಕನ್ಯೆಯರಾಗಿದ್ದರೆಂದು ವಾಕ್ಯವು ಹೇಳುತ್ತದೆ. ಪ್ರಾಚೀನ ಜಗತ್ತಿನಲ್ಲಿ, ಯುವಜನರು ನಿಶ್ಚಿತಾರ್ಥ ಮಾಡಿಕೊಂಡಾಗ (ಗೊತ್ತುಪಡಿಸಲ್ಪಟ್ಟಾಗ), ಅವರು ಇನ್ನೂ ನಿಕಟ ಸಂಬಂಧವನ್ನಿಟ್ಟುಕೊಳ್ಳದೆ ಇದ್ದಾಗ್ಯೂ ಅವರನ್ನು ಜನರು ಗಂಡಹೆಂಡರೆಂದು ಕರೆಯುತ್ತಿದ್ದರು. ಒಂದು ನಿಶ್ಚಿತಾರ್ಥವು (ಗೊತ್ತುಪಡಿಸಲ್ಪಡುವಿಕೆ) ಸುಲಭವಾಗಿ ರದ್ದುಗೊಳಿಸಲ್ಪಡಲು ಸಾಧ್ಯವಿರಲಿಲ್ಲ. ಅದು ನಿರ್ಬಂಧವೆಂದು ಪರಿಗಣಿಸಲ್ಪಡುತ್ತಿತ್ತು; "ಗಂಡ" ನು ಮದುವೆಯನ್ನು ಪೂರ್ಣಗೊಳಿಸದಿರಲು ನಿರ್ಧರಿಸಿಕೊಂಡರೆ, ವಾಸ್ತವಿಕದಲ್ಲಿ ಆತನು ತನ್ನ "ಹೆಂಡತಿ"ಗೆ ವಿಚ್ಛೇದನವನ್ನು ಕೊಡಬೇಕಾಗಿರುತ್ತಿತ್ತು (ನೋಡಿರಿ ಮತ್ತಾಯ 1:18-25). ಇಂದು ಅನೇಕ ದಂಪತಿಗಳು ಜನರ ಅಪಹಾಸ್ಯಕ್ಕೊಳಗಾಗದೆ ಅಥವಾ ನಾಗರಿಕ ಕಟ್ಟಳೆಗಳನ್ನು ಉಲ್ಲಂಘಿಸದೆ ಮದುವೆಯಾಗಿರುವರೋ ಎಂಬಂತೆ ಒಟ್ಟಾಗಿ ಜೀವಿಸುತ್ತಿದ್ದಾರೆ, ಆ ವಿಧವಾಗಿ ನಿಶ್ಚಿತಾರ್ಥ, ಮದುವೆ, ಮತ್ತು ಲೈಂಗಿಕ ಚಟುವಟಿಕೆಗಳ ಕಡೆಗಿರುವ ನಿರ್ಲಕ್ಷ್ಯವು ಬೈಬಲಿನ ಸಮಯಗಳಲ್ಲಿ ಸಾಧ್ಯವಿರಲಿಲ್ಲ. ಇಂತಹದ್ದು ಪಾಶ್ಚಾತ್ಯ ಸಮಾಜಗಳಲ್ಲಿ ಆಧುನಿಕ ಕಾಲದ ತನಕವೂ ನಡೆದಿರಲಿಲ್ಲ, ಮತ್ತು ಅಂಥ ಒಂದು ಅಭ್ಯಾಸಕ್ಕೆ ಎಂದಿಗೂ ದೇವರ ಅನುಮೋದನೆ ಇರಲಾರದು.

ಒಂದು ಲೋಟನು ತನಗೆ ಮನೆಯೊಳಗೆ ಸುರಕ್ಷತೆಯು ಸಿಕ್ಕುವದೆಂದು ಭಾವಿಸಿಕೊಂಡಿದ್ದಲ್ಲಿ, ಅದು ದುಃಖಕರವಾಗಿಯೂ ಆತನ ತಪ್ಪು ಕಲ್ಪನೆಯಾಗಿತ್ತು. ಆತನಿಗೆ ಇನ್ನು ಯಾರಾದರೂ ಕುಟುಂಬ ಸದಸ್ಯರಿದ್ದರೆ, ಆತನು ಅವರನ್ನು **ಊರಹೊರಕ್ಕೆ** ಕರೆದುಕೊಂಡು ಬರತಕ್ಕದ್ದು ಯಾಕೆಂದರೆ **ಈ ಸ್ಥಳವನ್ನು ನಾಶ ಮಾಡುವದು** ನಮ್ಮ ಧ್ಯೇಯವಾಗಿರುತ್ತದೆ ಎಂದು ಆತನನ್ನು ಎಚ್ಚರಿಸಿದರು. ಬಳಿಕ ದೂತರು ಸೊದೋಮಿನ ಮೇಲೆ ಬರಲಿದ್ದ ನಾಶನಕ್ಕೆ ಕಾರಣವೇನೆಂಬುದನ್ನು ಲೋಟನಿಗೆ ವಿವರಿಸಿದದರು: **ಇಲ್ಲಿಯವರ ವಿಷಯವಾಗಿ ಬಲು ದೊಡ್ಡ ಮೊರೆಯು ಯೆಹೋವನಿಗೆ ಮುಟ್ಟಿದ್ದರಿಂದ** ಪಟ್ಟಣವನ್ನು **ನಾಶಮಾಡುವದಕ್ಕಾಗಿ** ಆತನು ತನ್ನ ದೂತರನ್ನು ಕಳುಹಿಸಿದ್ದಾನೆ.

**ವಚನ 14. ಲೋಟನು** ತನ್ನ ಮನೆಯಿಂದ ಹೊರಕ್ಕೆ ಬಂದು **ತನ್ನ ಹೆಣ್ಣು ಮಕ್ಕಳನ್ನು ಗೊತ್ತುಮಾಡಿಕೊಂಡಿದ್ದ ಅಳಿಯಂದಿರಿಗೆ ಈ ಸಂಗತಿಯನ್ನು ತಿಳಿಸಿ** ಮಾತಾಡುವ ಮೂಲಕ ಪ್ರತಿಕ್ರಿಯಿಸುತ್ತಾನೆ. ಬೇಗನೆ ಇಲ್ಲಿಂದ ಹೊರಡಿರಿ, ಯಾಕೆಂದರೆ **ಯೆಹೋವನು ಈ ಊರನ್ನು** ಸ್ವಲ್ಪ ಹೊತ್ತಿನೊಳಗೆ **ನಾಶಮಾಡುತ್ತಾನೆ** ಎಂದು ಅವರಿಗೆ ಹೇಳಿದನು. ಆತನು ಈ ಯುವಕರಿಗೆ ಕಳೆದ ರಾತ್ರಿ ತನ್ನ ಮನೆಯಲ್ಲಿ ನಡೆದ ಗಮನಾರ್ಹವಾದ ಘಟನೆಗಳ ಕುರಿತು ಹಂಚಿಕೊಂಡಿರಬಹುದು: ಇಬ್ಬರು ಅಪರಿಚಿತರ ಬರುವಿಕೆ, ಕೋಪಗೊಂಡಿದ್ದ ಜನರ ಗುಂಪು, ತನ್ನ ಅತಿಥಿಗಳಿಗೆ ಮತ್ತು ಅವನಿಗೆ ವಿರುದ್ಧವಾಗಿ ನೀಡಲ್ಪಟ್ಟ ಬೆದರಿಕೆಗಳು, ಮತ್ತು ಸೊದೋಮಿನ ನಾಗರೀಕರಿಂದ ದೇವರು ಇಂತಹ ಹೊಲಸು ನಡವಳಿಕೆಯನ್ನು ಇನ್ನೆಂದಿಗೂ ಸಹಿಸಿಕೊಳ್ಳುವದಿಲ್ಲ.

ಲೋಟನ ಕಥೆಯನ್ನು ಕೇಳಿ **ಅಳಿಯಂದಿರು** ಸ್ವಲ್ಪವೂ ಕದಲಲಿಲ್ಲ ಮತ್ತು ಆತನು **ಗೇಲಿಮಾಡು**ತ್ತಿದ್ದಾನೆಂದು ಅವರು ಯೋಚಿಸಿಕೊಂಡರು. ಅದು ಅವರಿಗೆ ಗಂಭೀರವಾಗಿ ತೆಗೆದುಕೊಳ್ಳದಷ್ಟು ಸಂಭವನೀಯವಲ್ಲದ ಘಟನೆ ಎಂದು ಕಂಡಿತ್ತು, ಅದು ಮೂರ್ಖತನವೆಂಬುದಾಗಿ ಅವರು ತಳ್ಳಿ ಹಾಕಿದರು. ಈ ಘಟನಾವಳಿಗಳು ಕುಟುಂಬದ ನಾಯಕನಾಗಿ ಲೋಟನು ಎಷ್ಟೊಂದು ಅಸಮರ್ಥನಾಗಿದ್ದನು ಮತ್ತು ಅಳಿಯಂದಿರ ಮುಂದೆ

ಆತನಿಗೆ ಎಷ್ಟೊಂದು ಅಲ್ಪವಾದ ವಿಶ್ವಾಸರ್ಹತೆಯಿತ್ತೆಂಬುದನ್ನು ತಿಳಿಸಬಹುದಾಗಿದೆ.

ಒಂದು ವೇಳೆ ಆತನು ಅವರಿಗೆ ಅತಿಥಿಗಳನ್ನು ಕಾಪಾಡುವದಕ್ಕೋಸ್ಕರ ತನ್ನ ಪುತ್ರಿಯರನ್ನು ಮರಣಾಂತಿಕವಾದ ಅಪಾಯಕ್ಕೆ ಒಪ್ಪಿಸಲು ಸಹ ಸಿದ್ಧನಾಗಿದ್ದನೆಂಬುದನ್ನು ಕುರಿತು ತಿಳಿಸಿದ್ದಾದರೆ, ಇದೊಂದೇ ಸಂಗತಿಯು ಇದುವರೆಗೂ ಅವರ ದೃಷ್ಟಿಯಲ್ಲಿದ್ದ ಅವನ ವಿಷಯದಲ್ಲಿದ್ದ ಗೌರವ ಅಥವಾ ವಿಶ್ವಾಸರ್ಹತೆಯನ್ನು ನಾಶಗೊಳಿಸಿರಬಹುದಾಗಿದೆ. ಏನೇ ಸಂಭವಿಸಿದ್ದರೂ ಸರಿಯೇ, ಅವರು ಆತನ ಎಚ್ಚರಿಕೆಯನ್ನು ನಿರಾಧಾರವೆಂದು ತಳ್ಳಿ ಹಾಕಿದರು ಮತ್ತು ಪಟ್ಟಣವನ್ನು ಬಿಟ್ಟು ಬರುವದಕ್ಕೆ ಯಾವ ಸಿದ್ಧತೆಗಳನ್ನೂ ಮಾಡಲಿಲ್ಲ.

ಕಥನದಲ್ಲಿ ಈ ಮುಂಚೆ, ಲೇಖಕನು ಲೋಟನಿಗೆ "ಕುರಿದನ ಗುಡಾರಗಳಿದ್ದವು" (13:5), "ಆಸ್ತಿ ಬಹಳ" ಆಗಿತ್ತು (13:6), ಮತ್ತು ಬಹಳಷ್ಟು "ದನಕಾಯುವವರು" ಇದ್ದರು (13:7, 8) ಎಂದು ಹೇಳಿದನು; ಹೇಗೂ, ಬಿಕ್ಕಟ್ಟಿನ ಸಮಯದಲ್ಲಿ, ಆತನು ಈ ವ್ಯಕ್ತಿಗಳ ಬಗ್ಗೆಯಾಗಲಿ ಅವರ ಕುಟುಂಬಗಳ ಬಗ್ಗೆಯಾಗಲಿ ಯಾವ ಕಾಳಜಿಯನ್ನೂ ತೋರಿಸಲಿಲ್ಲ. ಆತನು ಅವರ ಬಗ್ಗೆ ದೂತರ ಮುಂದೆ ಪ್ರಸ್ತಾಪಿಸಲೂ ಇಲ್ಲ ಅವರನ್ನು ಬರಲಿರುವ ನಾಶನದ ಕುರಿತು ಎಚ್ಚರಿಸಿ ಅದರಿಂದ ತಪ್ಪಿಸಿಕೊಳ್ಳಲು ಓಡುವಂತೆ ಹೇಳಲೂ ಇಲ್ಲ. ಲೋಟನು ಈ ವ್ಯಕ್ತಿಗಳೊಂದಿಗೆ ತನ್ನ ನಂಬಿಕೆಯ ಕುರಿತು ಎಂದಿಗೂ ಹಂಚಿಕೊಳ್ಳದೆ ಅಥವಾ ಆತನ ದೊಡ್ಡಪ್ಪನಾದ ಅಬ್ರಹಾಮನ ಕಾರಣದಿಂದ ದೇವರು ತನ್ನನ್ನು ಎಷ್ಟೊಂದು ಆಶೀರ್ವದಿಸಿದ್ದಾನೆಂಬುದರ ಕುರಿತು ತಿಳಿಯಪಡಿಸದೆ ಇರುವದಕ್ಕೆ ಸಾಧ್ಯವಿದೆಯೋ? ಈತನ ನಿರ್ಲಕ್ಷ್ಯ ಅಥವಾ ತಮ್ಮೊಂದಿಗೆ ಅನ್ಯಾಯವಾಗಿ ನಡೆದುಕೊಳ್ಳುವವನೆಂಬ ಕಾರಣಕ್ಕೆ ಇವರು ಆತನ ಮೇಲಿದ್ದ ಗೌರವವನ್ನು ಕಳೆದುಕೊಂಡಿದ್ದರೋ? ಆತನು ಪಟ್ಟಣದೊಳಗೆ ಜೀವಿಸಬೇಕೆಂಬ ಬಯಕೆಯನ್ನು ಹೊಂದಿರುವದು, ಕನಿಷ್ಠ ಅವರ ಮನಸ್ಸಿಲ್ಲಾದರೂ, ಅವನು ಸೊದೋಮಿನ ಕೆಟ್ಟತನದ ಕಡೆಗಿನ ಆಕರ್ಷಣೆಗೆ ಒಳಪಡಿಸಿಕೊಂಡಿದ್ದನೆಂಬ ಸೂಚನೆಯನ್ನು ನೀಡಿತ್ತೋ? ಏನೇ ಆಗಿದ್ದರೂ ಸರಿಯೇ, ಇಲ್ಲಿ ಲೋಟನು ತನ್ನ ಕುಟುಂಬ, ಅಳಿಯಂದಿರು, ಅಥವಾ ಸೇವಕರ ಮೇಲೆ ನೀತಿಯ ವಿಷಯದಲ್ಲಿ ಬಹಳ ಕಡಿಮೆ ಪ್ರಭಾವವನ್ನು ಹೊಂದಿದ್ದನೆಂಬುದಾಗಿ ತೋರಿಸಲ್ಪಟ್ಟಿದೆ.

## ಲೋಟನು ತಪ್ಪಿಸಿಕೊಂಡು ಚೋಗರ್ಗೆ ಹೋಗಿದ್ದು (19:15-22)

**15ಹೊತ್ತು ಮೂಡುವದಕ್ಕೆ ಮುಂಚೆ ಆ ದೂತರು ಲೋಟನಿಗೆ - ನೀನೆದ್ದು ಇಲ್ಲಿರುವ ನಿನ್ನ ಹೆಂಡತಿಯನ್ನೂ ನಿನ್ನ ಇಬ್ಬರು ಹೆಣ್ಣು ಮಕ್ಕಳನ್ನೂ ಬೇಗ ಕರಕೊಂಡು ಹೋಗು; ಊರಿಗೆ ಉಂಟಾಗುವ ದಂಡನೆಯಿಂದ ನಿನಗೂ ನಾಶವುಂಟಾದೀತು ಎಂದು ಹೇಳಿ ತ್ವರೆಪಡಿಸಿದರು.
16ಅವನು ತಡಮಾಡಲು ಯೆಹೋವನು ಅವನನ್ನು ಕನಿಕರಿಸಿದ್ದರಿಂದ ಆ ಮನುಷ್ಯರು ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ ಕೈಹಿಡಿದು ಹೊರಗೆ ತಂದು ಊರಾಚೆಗೆ ಬಿಟ್ಟರು. ಹೊರಗೆ ತಂದ ಮೇಲೆ ಆತನು - 17ಓಡಿಹೋಗು, ಪ್ರಾಣವನ್ನು ಉಳಿಸಿಕೋ; ಹಿಂದಕ್ಕೆ ನೋಡಬೇಡ; ಈ ಪ್ರದೇಶದೊಳಗೆ ಎಲ್ಲಿಯೂ ನಿಲ್ಲದೆ ಬೆಟ್ಟದ ಸೀಮೆಗೆ ಓಡಿಹೋಗು; ನಿನಗೂ ನಾಶವುಂಟಾದೀತು ಅಂದನು. 18ಅದಕ್ಕೆ ಲೋಟನು - ಸ್ವಾಮಿ, ಅದು ನನ್ನಿಂದಾಗದು; 19ನೀನು ನಿನ್ನ ದಾಸನ ಮೇಲೆ ದಯವಿಟ್ಟು ನನ್ನ ಪ್ರಾಣವನ್ನು ಉಳಿಸಿದ್ದು ಬಹು ವಿಶೇಷವಾದ ಉಪಕಾರವೇ; ಆದರೆ ಬೆಟ್ಟಕ್ಕೆ ಓಡಿಹೋಗಲಾರೆನು: ನಾನು ಹೋಗುತ್ತಿರುವಾಗ ಆ ವಿಪತ್ತು ನನಗೂ ಉಂಟಾಗಿ ಸತ್ತೇನು.
20ಅಗೋ, ಅಲ್ಲಿ ಒಂದು ಊರು ಹತ್ತಿರವಾಗಿದೆ; ಅದು ಸಣ್ಣದು; ಅಲ್ಲಿಗಾದರೂ ಹೋಗುವದಕ್ಕೆ ಅಪ್ಪಣೆಯಾದರೆ ನನ್ನ ಪ್ರಾಣ ಉಳಿಯುವದು; ಆ ಊರು ಸಣ್ಣದಲ್ಲವೇ ಅಂದನು. 21ಅದಕ್ಕಾತನು - ಈ ವಿಷಯದಲ್ಲಿಯೂ ನಿನಗೆ ಅನುಗ್ರಹಮಾಡಿದ್ದೇನೆ, ನೋಡು; ನೀನು ಹೇಳಿದ ಊರನ್ನು**

**ನಾನು ಕೆಡಹುವದಿಲ್ಲ. [22]ಬೇಗ ಅಲ್ಲಿಗೆ ಹೋಗಿ ತಪ್ಪಿಸಿಕೋ; ನೀನು ಅಲ್ಲಿಗೆ ಮುಟ್ಟುವ ತನಕ ನಾನೇನೂ ಮಾಡುವದಕ್ಕಾಗುವದಿಲ್ಲ ಅಂದನು. ಇದರಿಂದ ಆ ಊರಿಗೆ ಚೋಗರ್ ಎಂದು ಹೆಸರಾಯಿತು.**

**ವಚನ 15.** ಬೆಳಕಾಗುವ ಸಮಯವು ಬರುತ್ತಿದ್ದಂತೆ, **ದೂತರು ಲೋಟನಿಗೆ - ನೀನೆದ್ದು ಇಲ್ಲಿರುವ ನಿನ್ನ ಹೆಂಡತಿಯನ್ನೂ ನಿನ್ನ ಇಬ್ಬರು ಹೆಣ್ಣು ಮಕ್ಕಳನ್ನೂ** ಬರಲಿರುವ **ದಂಡನೆಯಿಂದ** (עָוֹן, *ಅವೊನ)* **ನಾಶವಾಗ**ದ ಹಾಗೆ ತಡೆಯುವಂತೆ **ಬೇಗ ಕರಕೊಂಡು ಹೋಗು** ಎಂದು ಕೇಳಿಕೊಂಡರು. ಇಬ್ರಿಯ ಪದವಾದ *ಅವೊನ* ಎಂಬುದನ್ನು "ಪಾಪ," "ಅಧರ್ಮ," ಅಥವಾ "ಅಪರಾಧ" ಎಂದು ಸಹ ಅನುವಾದಿಸಬಹುದಾಗಿದೆ; ಆದದರಿಂದ, ಇದು ಸನ್ನಿವೇಶಕ್ಕನುಗುಣವಾಗಿ ಕಾರಣ ಮತ್ತು ಪರಿಣಾಮಗಳೆರಡರ ಅರ್ಥವನ್ನು ಹೊಂದಿರುತ್ತದೆ. ಈ ವಾಕ್ಯಭಾಗದಲ್ಲಿ, ಪಾಪಭರಿತ ಕೃತ್ಯಗಳು ಉಲ್ಲೇಖಿಸಲ್ಪಟ್ಟಿರುವದಿಲ್ಲ, ಆದರೆ ಸೊದೋಮಿನ ದುಷ್ಕೃತ್ಯಗಳಿಂದಾದ ಪರಿಣಾಮವು - ದೇವರಿಂದ ಬಂದ ದಂಡನೆಯು ಉಲ್ಲೇಖಿಸಲ್ಪಟ್ಟಿದೆ.[7] ಸೊದೋಮಿನ ಅಪರಾಧದ ಪಾತ್ರೆಯು ಈಗ ತುಂಬಿರುತ್ತದೆ, ಮತ್ತು ಯೆಹೋವನು ದಂಡನೆಯ ಭಯವಿಲ್ಲದೆ ಪಾಪ ಮಾಡಬಹುದು ಎಂದು ಯೋಚಿಸುವಂಥ ಒಂದು ಪಟ್ಟಣ ಅಥವಾ ಪ್ರಾಂತ್ಯವನ್ನು ಇನ್ನು ಮೇಲೆ ಸಹಿಸಿಕೊಳ್ಳುವದಿಲ್ಲ ಎಂಬುದಾಗಿ ದೂತರು ಲೋಟನಿಗೆ ಎಚ್ಚರಿಸಿದರು. ಸೊದೋಮಿನ ಪಾಪವು ಯೋರ್ದನ್ ಕಣಿವೆಯಲ್ಲೆಲ್ಲಾ ವ್ಯಾಪಕವಾಗಿರುವ ಕೆಟ್ಟತನವನ್ನು ಪ್ರತಿನಿಧಿಸುವದಾಗಿತ್ತು. ಇಡೀ ಪ್ರಾಂತ್ಯದ ಮೇಲೆ ನಾಶನವು ಬರಲಿತ್ತು ಯಾಕೆಂದರೆ ಅದರಲ್ಲಿನ ಜನರು ದುಷ್ಟ ಹಾಗೂ ಕೀಳುಮಟ್ಟಕ್ಕೆ ಇಳಿಸುವಂಥ ಪಾಪಗಳನ್ನು ನಡಿಸುವವರಾಗಿ ಅವುಗಳಿಂದ ವಿಮುಖರಾಗದೆ ಇದ್ದರು.

**ವಚನ 16.** ಹಾಗಿದ್ದರೂ, ಲೋಟನು ಪಟ್ಟಣವನ್ನು ಬಿಟ್ಟು ಹೋಗಲು **ತಡಮಾಡಿ**ದನು. ದೂತರು **ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ ಕೈಹಿಡಿದು**ಕೊಂಡರು; ಮತ್ತು ದೈವಿಕ ಸಂದೇಶಕರು ಅವರನ್ನು ಹೆಚ್ಚುಕಡಿಮೆ ಸೊದೋಮಿನಿಂದ ಹೊರಕ್ಕೆ ಎಳೆದುಕೊಂಡು ಬರಬೇಕೆನೋ ಎಂಬಂತೆ ಕಾಣಿಸಿತ್ತು. ಲೋಟ ಮತ್ತು ಆತನ ಕುಟುಂಬದವರು ಸನ್ನಿಹಿತವಾಗಿದ್ದ ನಾಶನದ ವಿಷಯದಲ್ಲಿ ಶೀಘ್ರವೇ ಪ್ರತಿಕ್ರಿಯಿಸಿರಬೇಕಾಗಿತ್ತು, ಆದರೆ ಯಾವದೋ ಒಂದು ಕಾರಣಕ್ಕಾಗಿ ಅವರು ವಿಳಂಬ ಮಾಡಿದರು. ಅವರು ನಾಶನಕ್ಕೆ ಹೋಗಲಿದ್ದ ಪಟ್ಟಣದ ಅಪಮಾನಕರವಾದ ದುಷ್ಕೃತ್ಯದಲ್ಲಿ ಭಾಗಿಗಳಾಗಲಿಲ್ಲವಾದರೂ, ಸೊದೋಮ ಪಟ್ಟಣವು ಅವರ ಮೇಲೆ ಎಂತಹ ಒಂದು ಮರಣಾಂತಿಕವಾದ ಆಕರ್ಷಣೆಯನ್ನು ಹೊಂದಿರುವಂತೆ ಕಂಡಿತ್ತೆಂದರೆ ದೂತರು ಅಕ್ಷರಶಃ ಅವರನ್ನು ಅದರಿಂದ ಹೊರಗೆ ಓಡುವಂತೆ ಒತ್ತಾಯಗೊಳಿಸುವ ಅಗತ್ಯವು ಏರ್ಪಟ್ಟಿತ್ತು. ಲೋಟ ಮತ್ತು ಆತನ ಕುಟುಂಬದವರನ್ನು ಸುರಕ್ಷಿತ ಸ್ಥಳವೊಂದಕ್ಕೆ ಓಡಿ ಹೋಗುವಂತೆ ಮಾಡುವುದು ಏಕೆ ಅಷ್ಟೊಂದು ಕಷ್ಟಕರವಾಗಿತ್ತೆಂಬ ಕಾರಣವನ್ನು ಬೈಬಲಿನ ಕಥಾನಿರೂಪಕನು ವಿವರಿಸಲಿಲ್ಲ. **ಯೆಹೋವನು ಅವನನ್ನು ಕನಿಕರಿಸಿದ್ದರಿಂದ** ಆ ದೂತರು ಅವರನ್ನು **... ಹೊರಗೆ ತಂದು ಊರಾಚೆಗೆ ಬಿಟ್ಟರು** ಎಂದಷ್ಟೇ ಲೇಖಕನು ತಿಳಿಸುತ್ತಾನೆ.

**ವಚನ 17.** ದೂತರು ಲೋಟ ಮತ್ತು ಅವನ ಕುಟುಂಬವನ್ನು ಪಟ್ಟಣದಿಂದ ಹೊರಗೆ ಕರೆದುಕೊಂಡು ಬಂದಾದ ಬಳಿಕ, ಅವರಲ್ಲಿ ಒಬ್ಬನು **ಓಡಿಹೋಗು, ಪ್ರಾಣವನ್ನು ಉಳಿಸಿಕೋ ಅಂದನು**. 17 ರಿಂದ 22 ವಚನಗಳೊಳಗೆ ಐದು ಸಾರಿ, "ಉಳಿಸಿಕೋ" ("ಓಡಿ ಹೋಗು"; NIV) ಎಂಬ ಪದವು ಬಳಸಲ್ಪಟ್ಟಿದೆ. ಈ ಕುಟುಂಬಕ್ಕೆ ಸೊದೋಮನ್ನು ಬಿಟ್ಟು ಹೊರಡುವುದು ಎಷ್ಟೊಂದು ತುರ್ತು ಅಗತ್ಯವಿರುತ್ತದೆಂಬುದು ಈಗಲೂ ಪೂರ್ತಿಯಾಗಿ

ಮನವರಿಕೆಯಾಗಿರಲಿಲ್ಲ. ಪ್ರತಿರೋಧವನ್ನು ತೋರುತ್ತಲೇ ಇದ್ದಂಥ ಲೋಟನ ಕುಟುಂಬದವರ, ಮತ್ತು ಪರಿಸ್ಥಿತಿಯು ಬಹಳ ಅವಸರದಿಂದ ಕೂಡಿದೆ ಎಂಬುದನ್ನು ನೆನಪಿಸುತ್ತಿದ್ದ ದೂತರ ಚಿತ್ತಗಳ ನಡುವೆ ವಾಗ್ವಾದವು ಏರ್ಪಟ್ಟಿತ್ತು. ಅಷ್ಟುಮಾತ್ರವಲ್ಲದೆ, ಸೊದೋಮಿನ ಈ ಹಿಂದಿನ ನಿವಾಸಿಗಳಿಗೆ ವಿಳಂಬ ಮಾಡಬಾರದು ಅಥವಾ ಹಿಂದಿರುಗಿ **ನೋಡಬೇಡ** ಎಂದು ಹೇಳಲಾಗಿತ್ತು. ಅಲ್ಲದೆ ಅವರು **ಈ ಪ್ರದೇಶದೊಳಗೆ** (כִּכָּר, *ಕಿಕ್ಕಾರ)* ಅಥವಾ “ಮೈದಾನ” (NIV; NRSV; NEB) **ಎಲ್ಲಿಯೂ ನಿಲ್ಲದೆ** ಓಡಿ ಹೋಗಬೇಕೆಂದು ಸಹ ಹೇಳಲಾಗಿತ್ತು.

13:10ರಲ್ಲಿ, ಈ ಪ್ರಾಂತ್ಯವು “ಯೋರ್ದನ್ ಹೊಳೆಯ ಸುತ್ತಲಿನ ಪ್ರದೇಶ” ಎಂದು ಕರೆಯಲ್ಪಡುತ್ತದೆ. ಧರ್ಮೋಪದೇಶಕಾಂಡ 34:3ರ ಪ್ರಕಾರವಾಗಿ, ಈ ಪ್ರಾಂತ್ಯವು ಯೆರಿಕೋವಿನಿಂದ ಚೋಗರ್ನ ವರೆಗೂ, ಮೃತ ಸಮುದ್ರದ ದಕ್ಷಿಣಕ್ಕೆ ವಿಸ್ತರಿಸಿತ್ತು. ಸೊದೋಮಿನ ಮೇಲೆ ಬರಲಿದ್ದ ಸನ್ನಿಹಿತವಾದ ನಾಶನವು ಅದನ್ನು ದಾಟಿ ಇತರ ಅನೇಕ ಊರುಗಳಿಗೆ ಸಹ ವಿಸ್ತರಿಸಲ್ಪಡುವದಾಗಿತ್ತು ಎಂಬುದನ್ನು ದೂತರ ಬುದ್ಧಿವಾದವು ಸೂಚಿಸುತ್ತದೆ. ಅದದರಿಂದ, ಪಟ್ಟಣದ ಒಂದು ಹೊರಭಾಗದ ಸ್ಥಳದಲ್ಲಿ ನಿಂತುಕೊಳ್ಳುವುದು ಸುರಕ್ಷಿತವಾಗಿರಲಿಲ್ಲ. ಬದಲಾಗಿ, ಅವರು ಪೂರ್ವದ ಕಡೆಗಿರುವ ಮೋವಾಬಿನ **ಬೆಟ್ಟದ ಸೀಮೆಗೆ ಓಡಿಹೋಗ**ತಕ್ಕದ್ದಾಗಿತ್ತು (ಅದು ಮೃತ ಸಮುದ್ರದ ಮಟ್ಟದಿಂದ ಮೂರು ಸಾವಿರ ಅಡಿಗಳಷ್ಟು ಎತ್ತರದಲ್ಲಿರುವದಾಗಿತ್ತು), ಇಲ್ಲವಾದಲ್ಲಿ ಅವರಿಗೆ **ನಾಶವುಂಟಾಗು**ವದಾಗಿತ್ತು.

**ವಚನಗಳು 18, 19.** ಆ ಪ್ರಾಂತ್ಯವನ್ನು ಸಂಪೂರ್ಣವಾಗಿ ತೊರೆದು ಹೋಗುವದರ ಯೋಚನೆಯಿಂದ **ಲೋಟನು** ಪುನಃ ಹಿಂಜರಿದನು. ಆತನು ದೂತರ ಆಜ್ಞೆಯನ್ನು ತಿರಸ್ಕರಿಸುವವನಾಗಿ ಹೀಗೆ ಹೇಳಿದನು, **ಸ್ವಾಮಿ, ಅದು ನನ್ನಿಂದಾಗದು**. ಬಳಿಕ ಆತನು ಅದಕ್ಕೊಂದು ವಿರುದ್ಧವಾದ ಪ್ರಸ್ತಾಪವನ್ನು ಮುಂದಿಟ್ಟನು, ದೂತರು ಅವನ ಪ್ರಾಣವನ್ನು ಉಳಿಸುವದಕ್ಕೆ ಪ್ರಯತ್ನಿಸುತ್ತಿದ್ದರೆಂಬುದರ ಬೆಳಕಿನಲ್ಲಿ ನೋಡಿದರೆ ಅದು ಆಘಾತಕಾರಿಯಾಗಿತ್ತು. ಲೋಟನು ಅವರ ದೈವಿಕ ಅಪ್ಪಣೆಗಳನ್ನು ವಿರೋಧಿಸುತ್ತಲೇ ಇದ್ದನು. ಅವರು ಈತನ ಮೇಲೆ **ದಯವಿಟ್ಟದ್ದಕ್ಕೆ** (חֵן, *ಚೆನ್)* ಅಥವಾ “ಕೃಪೆ”[8] (ನೋಡಿರಿ 6:8; ವಿಮೋಚನಕಾಂಡ 33:12) ತೋರಿದ್ದಕ್ಕಾಗಿ ಕೃತಜ್ಞತೆಯನ್ನಂತೂ ಸಲ್ಲಿಸಿದನು. ಅವನ **ಪ್ರಾಣವನ್ನು ಉಳಿಸಿ** ಅವನಿಗೆ **ವಿಶೇಷವಾದ ಉಪಕಾರ** (חֶסֶד, *ಚೆಸೆದ್*, “ಒಳ್ಳೇತನ, ದಯೆ”[9]) ಮಾಡಿದ್ದಕ್ಕಾಗಿ ಕೃತಾರ್ಥನಾಗಿದ್ದನು. ಅದೇ ಸಮಯದಲ್ಲಿ, ಈತನು ದೂತರ ಮನವಿಯನ್ನು ನಿರಾಕರಿಸುತ್ತಾ **ಬೆಟ್ಟ**ಗಳು ಬಹಳ ದೂರದಲ್ಲಿವೆ ಎಂಬ ಅಭಿಪ್ರಾಯ ತಿಳಿಸಿದನು. ಬೆಟ್ಟಕ್ಕೆ **ಓಡಿಹೋಗುವದು** ಅಸಾಧ್ಯವಾದದ್ದು ಯಾಕೆಂದರೆ ಆತನು ಓಡಿ ಹೋಗುವಾಗ **ವಿಪತ್ತು** ಸಂಭವಿಸಿ ಸತ್ತು ಹೋಗುವೆನೆಂದು ಹೆದರಿದನು.

**ವಚನ 20.** ಅವರು ಒಂದು **ಸಣ್ಣ** ಮತ್ತು **ಹತ್ತಿರ**ವಿರುವ **ಊರ**ನ್ನು ಕಂಡಾಗ, **ಅಲ್ಲಿಗಾದರೂ ಹೋಗುವದಕ್ಕೆ ಅಪ್ಪಣೆಯಾದರೆ ನನ್ನ ಪ್ರಾಣ ಉಳಿಯುವದು** ಎಂದು ಕೇಳಿದನು. ಸೊದೋಮಿನ ನಾಶನವು ಸನ್ನಿಹಿತವಾಗಿದ್ದರಿಂದ, ಲೋಟನು ತಾನು ತಪ್ಪಿಸಿಕೊಳ್ಳುವದಕ್ಕೆ ಯಾವ ಮಾರ್ಗದ ಕಡೆಗೆ ಓಡಬೇಕೆಂಬ ವಿಷಯದಲ್ಲಿ ದೂತರ ಸಂಗಡ ವಾದಿಸುವದರಲ್ಲಿ ತನ್ನ ಸಮಯವನ್ನು ಕಳೆದನು. ಸೊದೋಮನ್ನು ತೊರೆಯುವ ಯೋಚನೆಯಿಂದ ಹಿಂಜರಿದ ಬಳಿಕ, ಆತನು ಸುರಕ್ಷಿತವಾಗಿರುವದಕ್ಕೆ ದೂರದ ಬೆಟ್ಟಗಳಿಗೆ ಓಡಿ ಹೋಗುವಷ್ಟು ಸಮಯವಿರುವದಿಲ್ಲ ಎಂಬುದಾಗಿ ವಾದಿಸಿದನು.

**ವಚನ 21.** ಅಬ್ರಹಾಮನ ತಮ್ಮನ ಮಗನಾದ ಈ ಅವಿಧೇಯತೆಯುಳ್ಳ ವ್ಯಕ್ತಿಯನ್ನು

ರಕ್ಷಿಸುವದಕ್ಕೆ ಅತ್ಯಂಥ ಕಷ್ಟಕರವಾಗಿತ್ತು! ವಿಧೇಯನಾಗುವದಕ್ಕೆ ವಿಳಂಬ ಮಾಡಿ ದೂತರ ಎಚ್ಚರಿಕೆಗಳಿಗೆ ಪ್ರತಿರೋಧವನ್ನು ಮಾಡಿದಾಗ್ಯೂ, ಕೃಪೆಯ ಮೂಲಕ ದೈವಿಕ ಸಂದೇಶಕರು ಆತನ ಮನವಿಗೆ ಒಪ್ಪಿದರು. ಲೋಟನಿಗೆ ಬೆಟ್ಟಕ್ಕೆ ಓಡಿ ಹೋಗಬೇಕೆಂದು ನೀಡಿದ್ದ ಆಜ್ಞೆಯನ್ನು ಹಿಂಪಡೆದವರಾಗಿ, ಯೆಹೋವನ ಪ್ರತಿನಿಧಿಗಳು ಯೋರ್ದನ್ ಕಣಿವೆಯಲ್ಲಿನ ಸಕಲ ಊರುಗಳನ್ನು ನಿರ್ಮೂಲ ಮಾಡಬೇಕೆಂಬ ಆತನ ಯೋಜನೆಯನ್ನು ತಿದ್ದುಪಡಿ ಮಾಡಿದರು. ಲೋಟನು ಆಶ್ರಯ ಪಡೆದುಕೊಳ್ಳಲು ಅಪೇಕ್ಷಿಸಿದ ಚಿಕ್ಕ **ಊರನ್ನು ನಾನು ಕೆಡಹುವದಿಲ್ಲ** ಎಂದು ವಾಗ್ದಾನ ಮಾಡಿದನು.

ಈ ಘಟನೆಯಲ್ಲಿ ಲೋಟನ ಮನವಿಯು ಒಂದು ವಿಧದಲ್ಲಿ ಅಧ್ಯಾಯ 18ರಲ್ಲಿ ಅಬ್ರಹಾಮನು ಮಾಡಿದ ಮನವಿಯಂತೆಯೇ ಇರುತ್ತದೆ. ಈ ಹಿಂದಿನ ಕಥನದಲ್ಲಿ ಮೂಲಪಿತೃವಿನ ಮನವಿಗೆ ಪ್ರತ್ಯುತ್ತರವಾಗಿ, ದೇವರು ಸೊದೋಮಿನಲ್ಲಿ ಸಾಕಷ್ಟು ಸಂಖ್ಯೆಯ ನೀತಿವಂತರು ವಾಸಿಸುತ್ತಿರುವದಾದರೆ ಅಲ್ಲಿರುವ ಎಲ್ಲಾ ನಿವಾಸಿಗಳನ್ನು ನಾಶಗೊಳಿಸುವದಿಲ್ಲ ಎಂದು ಸಮ್ಮತಿಸಿದನು. ಈ ಕಥನದಲ್ಲಿ, ಲೋಟನು ಅವಸರವಾಗಿ ಬೆಟ್ಟಗಳನ್ನು ಹತ್ತಿ ಆಶ್ರಯವನ್ನು ತೆಗೆದುಕೊಳ್ಳುವದಕ್ಕೆ ಸಾಧ್ಯವಾಗುವ ಹಾಗೆ ಯೋರ್ದನ್ ಕಣಿವೆಯಲ್ಲಿನ ಸಕಲ ಊರುಗಳನ್ನು ನಾಶಗೊಳಿಸಬೇಕೆಂದು ತನಗೆ ನಿಯೋಜಿಸಲ್ಪಟ್ಟ ಯೋಜನೆಯಲ್ಲಿ ಹಿಂದಕ್ಕೆ ಸಾಗುವಂತೆ ಯೆಹೋವನ ದೂತನ ಮನವೊಲಿಸಿದನು. ಲೋಟನು ತನ್ನೆಲ್ಲಾ ಸಮಯವನ್ನು ದೈವಿಕ ಅಪ್ಪಣೆಗಳ ಕುರಿತು ವಾದ ಮಾಡುವದರಲ್ಲಿ ಕಳೆಯದೆ ಹೋಗಿದ್ದರೆ ಬೆಟ್ಟಗಳಿಗೆ ಓಡಿ ಹೋಗಲು ಸಾಕಷ್ಟು ಸಮಯವಿರುತ್ತಿತ್ತೆಂದು ಹೇಳಬೇಕೆಂಬುದಾಗಿ ದೂತನ ಮನಸ್ಸಿಗೆ ತೋರಿರಬಹುದಾಗಿದೆ.

**ವಚನ 22.** ಯೆಹೋವನ ಕರುಣೆಗೆ ಜಯವಾಯಿತು, ಮತ್ತು ಈ ಊರಿನ ಜನರು ದೈವಿಕ ನ್ಯಾಯತೀರ್ಪಿಗೆ ಗುರಿಯಾಗುವದರಿಂದ ಉಳಿಸಲ್ಪಟ್ಟರು (ನೋಡಿರಿ ಯಾಕೋಬ 2:13). ದೂತರಲ್ಲೊಬ್ಬನು ಲೋಟನಿಗೆ **ಬೇಗ ಅಲ್ಲಿಗೆ ಹೋಗಿ ತಪ್ಪಿಸಿಕೋ; ನೀನು ಅಲ್ಲಿಗೆ ಮುಟ್ಟುವ ತನಕ ನಾನೇನೂ ಮಾಡುವದಕ್ಕಾಗುವದಿಲ್ಲ.**

ಬಳಿಕ ವಚನವು ಹೀಗೆ ವಿವರಿಸುತ್ತದೆ, **ಇದರಿಂದ ಆ ಊರಿಗೆ ಚೋಗರ್ ಎಂದು ಹೆಸರಾಯಿತು.** NIVಯಲ್ಲಿ ಇದು ಒಂದು ಪ್ರಕ್ಷೇಪದ ಹೇಳಿಕೆಯಾಗಿ ಬರೆಯಲ್ಪಟ್ಟಿದೆ: "(ಆ ಕಾರಣದಿಂದ ಈ ಊರಿಗೆ ಚೋಗರ್ ಎಂಬ ಹೆಸರಾಯಿತು.)" ಈ ಹೆಸರು ಶಬ್ದಾಡಂಬರವಾಗಿರುತ್ತದೆ, ಯಾಕೆಂದರೆ "ಜೋಗರ್" ಎಂದರೆ "ಸಣ್ಣ" ಎಂದರ್ಥವಾಗಿದೆ (ನೋಡಿರಿ 19:20). ಮೃತ ಸಮುದ್ರದ ದಕ್ಷಿಣ ದಿಕ್ಕಿನಲ್ಲಿದ್ದ ಈ ಸ್ಥಳವು ಮೋವಾಬಿನ ಬೆಟ್ಟಗಳ ಪ್ರಸ್ಥಭೂಮಿಯ ದಾರಿಯಲ್ಲಿತ್ತು.

## ಕರ್ತನ ನ್ಯಾಯತೀರ್ಪು ಪೂರ್ತಿಗೊಂಡಿದ್ದು (19:23-29)

**23ಲೋಟನು ಚೋಗರಿಗೆ ಮುಟ್ಟುವಷ್ಟರಲ್ಲಿ ಸೂರ್ಯನು ಮೂಡಿದನು. 24ಆಗ ಯೆಹೋವನು ಸೊದೋಮ್ ಗೊಮೋರಗಳ ಮೇಲೆ 25ಆಕಾಶದಿಂದ ಅಗ್ನಿಗಂಧಕಗಳನ್ನು ಸುರಿಸಿ ಆ ಪಟ್ಟಣಗಳನ್ನೂ ಸುತ್ತಲಿರುವ ಸೀಮೆಯೆಲ್ಲವನ್ನೂ ಊರುಗಳಲ್ಲಿದ್ದ ಜನರೆಲ್ಲರನ್ನೂ ಭೂಮಿಯ ಮೇಲಣ ಎಲ್ಲಾ ಬೆಳೆಯನ್ನೂ ಹಾಳುಮಾಡಿದನು. 26ಲೋಟನ ಹೆಂಡತಿ ಅವನ ಹಿಂದೆ ಬರುತ್ತಿರುವಾಗ ಹಿಂದಿರುಗಿ ನೋಡಿದ್ದರಿಂದ ಉಪ್ಪಿನ ಕಂಬವಾದಳು. 27ಇತ್ತಲಾಗಿ ಅಬ್ರಹಾಮನು ಬೆಳಿಗ್ಗೆ ಎದ್ದು ತಾನು ಯೆಹೋವನ ಸನ್ನಿಧಿಯಲ್ಲಿ ನಿಂತಿದ್ದ ಸ್ಥಳಕ್ಕೆ ತಿರಿಗಿ ಬಂದು 28ಸೊದೋಮ್ ಗೊಮೋರಗಳ ಕಡೆಗೂ ಆ ಎಲ್ಲಾ ಸೀಮೆಯ ಕಡೆಗೂ ನೋಡಿದಾಗ, ಅಯ್ಯೋ, ಆ ಪ್ರದೇಶದಿಂದ**

**ಹೊಗೆಯು ಆವಿಗೆಯ ಹೊಗೆಯಂತೆ ಏರಿತು. [29]ದೇವರು ಆ ಸೀಮೆಯ ಪಟ್ಟಣಗಳನ್ನು ನಾಶಮಾಡಿದಾಗ ಲೋಟನು ವಾಸವಾಗಿದ್ದ ಊರುಗಳನ್ನು ಕೆಡವಿದರೂ ಅಬ್ರಹಾಮನನ್ನು ನೆನಸಿ ಲೋಟನನ್ನು ತಪ್ಪಿಸಿ ಕಾಪಾಡಿದನು.**

**ವಚನ 23.** ಈ ವಚನವು ಒಂದು ಸ್ಥಿತ್ಯಂತರವಾಗಿರುತ್ತದೆ. ಇದನ್ನು ಹಿಂದಿನ ಪರಿಚ್ಛೇದದ (19:15-22) ಮುಕ್ತಾಯವೆಂಬುದಾಗಿ ಅರ್ಥಮಾಡಿಕೊಳ್ಳಬಹುದು, **ಲೋಟನು ಚೋಗರಿಗೆ** ಸುರಕ್ಷಿತವಾಗಿ ಬಂದು ಸೇರಿದನೆಂಬುದಾಗಿ ವರದಿ ಮಾಡುತ್ತದೆ (ನೋಡಿರಿ RSV; NRSV). ಇನ್ನೊಂದೆಡೆಯಲ್ಲಿ, ಇದನ್ನು ಈ ವಿಭಾಗದ (19:23-29) ಆರಂಭವೆಂಬುದಾಗಿ ಅರ್ಥನಿರೂಪಣೆ ಮಾಡಬಹುದಾಗಿದೆ, ಸೊದೋಮ ಮತ್ತು ಗೊಮೋರ ಪಟ್ಟಣಗಳ ನಾಶನವು ಯಾವಾಗ ಸಂಭವಿಸಿತು ಎಂಬುದಕ್ಕೆ ಸಮಯದ ಉಲ್ಲೇಖವನ್ನು ಮಾಡುತ್ತದೆ (ಅವನು ಅಲ್ಲಿಗೆ **ಮುಟ್ಟುವಷ್ಟರಲ್ಲಿ ಸೂರ್ಯನು ಮೂಡಿದನು**).[10] NASBಯೂ ಸೇರಿದಂತೆ ಬಹುಪಾಲು ಆವೃತ್ತಿಗಳು, ಈ ಕಡೆಯ ಅಭಿಪ್ರಾಯದ ಪರವಾಗಿ ಒಲವು ಹೊಂದಿರುತ್ತವೆ.

**ವಚನ 24.** ದೂತರು ಲೋಟನಿಗೆ ಮಾಡಿದ್ದ ವಾಗ್ದಾನವನ್ನು ದೇವರು ಕಾಪಾಡಿಕೊಂಡನು, ಮತ್ತು ಅಬ್ರಹಾಮನ ತಮ್ಮನ ಮಗನು ಸುರಕ್ಷಿತವಾಗಿ ಚೋಗರಿಗೆ ಮುಟ್ಟುವ ತನಕವು ದುಷ್ಟ ಪಟ್ಟಣಗಳ ನಾಶನವು ಆರಂಭಗೊಳ್ಳಲಿಲ್ಲ. **ಆಗ ಯೆಹೋವನು ಸೊದೋಮ್ ಗೊಮೋರಗಳ ಮೇಲೆ ಆಕಾಶದಿಂದ ಅಗ್ನಿಗಂಧಕಗಳನ್ನು ಸುರಿಸಿ**ದನು. "ಅಗ್ನಿಗಂಧಕಗಳು" ಎಂಬುದು וָאֵשׁ גָּפְרִית *(ಗಾಪ್ರಿಥ್ ವಾಯಿಶ್)* ಎಂಬುದರ ಜನಪ್ರಿಯವಾದ ಅನುವಾದವಾಗಿದೆಯಾದರೂ, ಇಬ್ರಿಯ ಪದದ ಒಂದು ಉತ್ತಮವಾದ ಅನುವಾದವೆಂದರೆ "ಉರಿಯುವ ಗಂಧಕ" (NIV) ಅಥವಾ "ಗಂಧಕದಿಂದ ಕೂಡಿದ ಅಗ್ನಿ" (NJPSV) ಎಂದಾಗಿರುತ್ತದೆ.

ದೇವರು ಹೇಗೆ ಇದನ್ನು ಬರಮಾಡಿದನು? ಒಂದು ಸಂಭಾವ್ಯವಾದ ಊಹೆಯೆಂದರೆ ಆತನು ಒಂದು ಶಕ್ತಿಶಾಲಿ ಭೂಕಂಪವನ್ನು ಬಳಸಿಕೊಂಡಾಗ ಅದು ಬಿಸಿಯಾದ ಅನಿಲಗಳನ್ನು, ಗಂಧಕ, ಮತ್ತು ತಾರು (ಡಾಂಬರು ಅಥವಾ ಕೀಲೆಣ್ಣೆ; ನೋಡಿರಿ 14:10) ಇವುಗಳು ರಭಸವಾದ ಭೂಕಂಪನದಿಂದ ಉಂಟಾದ ರಂದ್ರಗಳ ಮೂಲಕವಾಗಿ ಆಕಾಶದೆತ್ತರಕ್ಕೆ ಉಗಿಯಲ್ಪಡುವಂತೆ ಮಾಡಿತ್ತು ಎಂಬುದೆ.[11] ಆತನು ಕಣಿವೆಯುದ್ದಕ್ಕೂ ಅಗ್ನಿಯ ಸಂಪೂರ್ಣಾಹುತಿ ಸಂಭವಿಸುವಂತೆ ಅನಿಲ ಹಾಗೂ ಡಾಂಬರುಗಳು ಹೊತ್ತಿಕೊಳ್ಳುವಂತೆ ಆಕಾಶದಿಂದ ಮಿಂಚನ್ನು ಕಳುಹಿಸರಬಹುದಾಗಿದೆ.[12]

**ವಚನ 25.** ಯೆಹೋವನು ಯಾವದೋ ವಿಧವಾದ ದ್ವಿತಿಯ ಪ್ರಾಕೃತವಾದ ಶಕ್ತಿಗಳನ್ನು ಬಳಸಿರಬಹುದಾದರೂ, ಆತನು ತನ್ನ ದೈವಿಕ ಶಕ್ತಿಯಿಂದಲೇ ಸೊದೋಮ ಮತ್ತು ಗೊಮೋರ **ಪಟ್ಟಣಗಳನ್ನೂ ಸುತ್ತಲಿರುವ ಸೀಮೆಯೆಲ್ಲವನ್ನೂ ಊರುಗಳಲ್ಲಿದ್ದ ಜನರೆಲ್ಲರನ್ನೂ ಹಾಳುಮಾಡಿದನು**. ಈ ಹೆಗ್ಗಿಚ್ಚಿನಿಂದಾಗಿ **ಭೂಮಿಯ ಮೇಲಣ ಎಲ್ಲಾ ಬೆಳೆಯೂ** ಸುಟ್ಟು ಬೂದಿಯಾಯಿತು.

**ವಚನ 26.** ಆ ಪ್ರಾಂತ್ಯದಲ್ಲಿ ನಿವಾಸಿಗಳೆಲ್ಲರಲ್ಲಿಯೂ ತಪ್ಪಿಸಿಕೊಂಡವರೆಂದರೆ ಲೋಟ ಮತ್ತು ಆತನ ಪುತ್ರಿಯರು ಮಾತ್ರವೇ ಆಗಿದ್ದರು, ಇವರು ಚೋಗರ ಎಂಬ ಸಣ್ಣ ಊರಿನಲ್ಲಿದ್ದರು. ಲೋಟನ **ಹೆಂಡತಿ**ಯು ಓಡಿ ಬರುವ ವೇಳೆ ಆತನಿಗೆ **ಅವನ ಹಿಂದೆ** ಉಳಿದಳು ಮತ್ತು 17ನೇ ವಚನದಲ್ಲಿ ಕೊಡಲ್ಪಟ್ಟ ದೈವಿಕ ಆಜ್ಞೆಗೆ ವಿರುದ್ಧವಾಗಿ **ಹಿಂದಿರುಗಿ ನೋಡುವ** ಮರಣಾಂತಿಕ ತಪ್ಪನ್ನು ಮಾಡಿದ್ದಳು. ಆಕೆಯು ತನ್ನ ಮನೆಯನ್ನು ಹಿಂದಿರುಗಿ ನೋಡಬೇಕೆಂದು ವಿಳಂಬ ಮಾಡಿದ್ದರಿಂದ, ಆಕೆಯು ಚೋಗರಿಗೆ ತಲುಪಿ ಸುರಕ್ಷಿತಳಾಗಲು ವಿಫಲಗೊಂಡಳು, ಒಂದು **ಉಪ್ಪಿನ ಕಂಬವಾದಳು**. ಈ ಬಣ್ಣನೆಯು, "ನ್ಯಾಯತೀರ್ಪಿನ ಸನ್ನಿವೇಶದಲ್ಲಿ"

ಕಾಣಿಸಿಕೊಳ್ಳುವದಾಗಿದ್ದು, "ಹಿಂದಿರುಗಿ ನೋಡುವವರಿಗಾಗುವ ಗತಿಯ ಒಂದೇ ಒಂದು ಚಿತ್ರವನ್ನು ಸೆರೆಹಿಡಿಯುವದಾಗಿದೆ (*ನೋಡಿ* ಇಬ್ರಿಯ 10:38, 39; ಲೂಕ 17:31-33)."[13]

ಕೆಲವರು ಆಧಾರವಿಲ್ಲದ ಕಲ್ಪನೆಯನ್ನು ಮಾಡಿಕೊಳ್ಳುವವರಾಗಿ ಲೋಟನ ಹೆಂಡತಿಯು ಅಗ್ನಿಮಯವಾದ ಸ್ಫೋಟದಿಂದ ನಾಶಗೊಂಡಳು ಮತ್ತು ಆಕೆಯ ಮೇಲೆ ಸುರಿಸಲ್ಪಡುತ್ತಿದ್ದ ಅವಶೇಷಗಳಿಂದ ಮುಚ್ಚಿಕೊಳ್ಳಲ್ಪಟ್ಟಳು, ಅದರಲ್ಲಿ ಮೃತದ ಸಮುದ್ರದ ನೈಋತ್ಯ ಪ್ರಾಂತ್ಯದ ಸಮೀಪದಲ್ಲಿ ಸಿಕ್ಕುವಂಥ ಉಪ್ಪಿನ ಗಣಿಗಳು ಸಹ ಆ ಅವಶೇಷಗಳಲ್ಲಿ ಸೇರಿತ್ತು ಎಂದು ಹೇಳುತ್ತಾರೆ. ಅಲ್ಲಿ ಸುಮಾರು ಒಂಭತ್ತು ಮೈಲಿಗಳಷ್ಟು ಉದ್ದ ಹಾಗೂ ಒಂದು ಮೈಲಿಯಷ್ಟು ಅಗಲವಾದ ಉಪ್ಪಿನ ಬೆಟ್ಟವು ಇರುತ್ತದೆ. ಅದು ಸೊದೋಮ ಬೆಟ್ಟ ಎಂದು ಕರೆಯಲ್ಪಡುತ್ತದೆ, ಮತ್ತು ಅದು ಉಪ್ಪಿನ ಗುಮ್ಮಟಗಳನ್ನು - ಪ್ರಾಥಮಿಕವಾಗಿ ಸೋಡಿಯಮ್ ಕ್ಲೋರೈಡ್ (ಪುಡಿ ಉಪ್ಪು), ಕೆಸರಿನಿಂದ ಮಿಶ್ರಣವಾಗಿರುವಂಥದ್ದು - ಒಳಗೊಂಡಿರುತ್ತದೆ, ಇವುಗಳು ಸಾವಿರಾರು ವರ್ಷಗಳ ಹಿಂದೆ ಭೂಮಿಯೊಳಗಿಂದ ಮೇಲಕ್ಕೆ ತಳ್ಳಲ್ಪಟ್ಟವುಗಳಾಗಿರುತ್ತವೆ. ಈ ಬೆಟ್ಟದಲ್ಲಿ ಕೆಲವು ಉಪ್ಪಿನ ಸ್ತಂಭಗಳು ಮತ್ತು ವಿಚಿತ್ರ ಆಕಾರಗಳನ್ನು ಇರುತ್ತವೆ, ಮತ್ತು ಇವುಗಳಲ್ಲಿ ಒಂದಕ್ಕಿಂತಲೂ ಹೆಚ್ಚಿನ ಆಕಾರಗಳನ್ನು ಲೋಟನ ಹೆಂಡತಿ ಎಂಬುದಾಗಿ ವೀಕ್ಷಕರು ಅರ್ಥೈಸಿಕೊಂಡಿರುತ್ತಾರೆ.

ಸೊಲೊಮೋನನ ಜ್ಞಾನೋಕ್ತಿ (ಕ್ರಿ.ಪೂ. ಮೊದಲನೆಯ ಶತಮಾನಕ್ಕೆ ಸೇರಿದ) ಒಂದು ಪ್ರೇರಿತವಲ್ಲದ ಪುಸ್ತಕದಲ್ಲಿ, ಲೇಖಕನು ಲೋಟನ ಕಾಲದಲ್ಲಿ ನಡೆದ ವಿನಾಶವನ್ನು ಮೃತ ಸಮುದ್ರದ ಸುತ್ತಲಿನ ಪ್ರಾಂತ್ಯವನ್ನು ಒಂದು "ಹೊಗೆಯಾಡುವ ಕಸದ ಪ್ರದೇಶ"ವನ್ನಾಗಿ ಮಾರ್ಪಡಿಸಿತ್ತೆಂದು ಬಣ್ಣಿಸುತ್ತಾನೆ. ಬಳಿಕ ಆತನು "ಒಂದು ಅಪನಂಬಿಕೆಯುಳ್ಳ ಆತ್ಮದ ಸ್ಮಾರಕವೆಂಬಂತೆ ಉಪ್ಪಿನ ಸ್ತಂಭವೊಂದು ನಿಂತಿರುವದು" ಎಂದು ಉಲ್ಲೇಖಿಸುತ್ತಾನೆ.[14] ಅದೇ ರೀತಿಯಲ್ಲಿಯೇ, ಕ್ರಿ.ಶ. ಪ್ರಥಮ ಶತಮಾನದಲ್ಲಿ Josephusನು, ಈ ಉಪ್ಪಿನ ಸ್ತಂಭವನ್ನು ನೋಡಿದ್ದೇನೆಂದು ಹೇಳಿಕೊಂಡನು; ಮತ್ತು ಅದು ಪ್ರವಾಸಿಗಳಿಗೆ ಕಾಣುವಂತೆ ಈಗಲೂ ಅಲ್ಲಿ ನಿಂತಿರುತ್ತದೆಂದು ವಾದಿಸಿದನು.[15] ಇಂದು ಸೊದೋಮ ಬೆಟ್ಟಕ್ಕೆ ಭೇಟಿ ಕೊಡುವ ಪ್ರವಾಸಿಗಳು ಒಂದು ವಿಧವಾದ ಅಸ್ಪಷ್ಟವಾದ ಸ್ತಂಭಗಳನ್ನು ಮತ್ತು ಆಕಾರಗಳನ್ನು ನೋಡಬಹುದಾದರೂ, ಅವುಗಳಲ್ಲಿ ಯಾವದೇ ಆಕಾರವನ್ನಾಗಲಿ ಲೋಟನ ಹೆಂಡತಿ ಎಂಬುದಾಗಿ ಗುರುತಿಸುವಂಥ ಉಪಾಖ್ಯಾನಗಳನ್ನು ಬೆಂಬಲಿಸುವ ಯಾವ ಪುರಾವೆಯೂ ಇರುವದಿಲ್ಲ.

**ವಚನ 27.** ಈ ಹಂತದಲ್ಲಿ, ಕಥನದೊಳಗೆ **ಅಬ್ರಹಾಮನು** ಕಾಣಿಸಿಕೊಳ್ಳುತ್ತಾನೆ. ಆತನು **ಬೆಳಿಗ್ಗೆ ಎದ್ದು** ಸುಮಾರು ಮೂರು ಮೈಲಿಗಳಷ್ಟು ಪ್ರಯಾಣಿಸಿ **ತಾನು ಯೆಹೋವನ ಸನ್ನಿಧಿಯಲ್ಲಿ ನಿಂತಿದ್ದ ಸ್ಥಳಕ್ಕೆ ತಿರಿಗಿ ಬಂದನು** (18:22).

**ವಚನ 28.** ಆತನು ಪಟ್ಟಣಗಳ ಕಡೆಗೂ ಯೋರ್ದನ್ನಿನ **ಆ ಎಲ್ಲಾ ಸೀಮೆಯ ಕಡೆಗೂ ನೋಡಿದಾಗ, ಆ ಪ್ರದೇಶದಿಂದ ಹೊಗೆಯು ಆವಿಗೆಯ ಹೊಗೆಯಂತೆ** ಮೇಲಕ್ಕೆ **ಏರಿ** ಹೋಗುವದನ್ನು ಕಂಡನು**.** ಧ್ವಂಸಗೊಂಡ ಪ್ರದೇಶದಿಂದ ಮೇಲೆ ಏರುತ್ತಿದ್ದ ಹೊಗೆಯು ಅತ್ಯಂಥ ದಟ್ಟವಾಗುವದನ್ನು ಕಂಡನು. "ಆವಿಗೆ" ಎಂಬುದಕ್ಕಿರುವ ಪದವು כִּבְשָׁן *(ಕಿಬ್ಶಾನ)*, ಇದು ಕುಂಬಾರದ ಕೆಲಸಕ್ಕೆ ಬಳಸುವದಕ್ಕೆ ಅಗತ್ಯವಾಗಿರುವ ಅತ್ಯಂಥ ಉಷ್ಣವುಳ್ಳ ಬೆಂಕಿಯ ಕುಲುಮೆಯನ್ನು ಸೂಚಿಸುತ್ತದೆ.[16] ಈ ಹಾಳಾಗಿ ಹೋಗಿರುವ ಪ್ರದೇಶವನ್ನು ನೋಡಿದವನಾಗಿ, ಲೋಟ ಮತ್ತು ಆತನ ಕುಟುಂಬ, ಮಾತ್ರವಲ್ಲದೆ ಆ ಪ್ರದೇಶದಲ್ಲಿನ ಇಡೀ ನಿವಾಸಿಗಳು ಅಗ್ನಿಯಲ್ಲಿ ಸುಟ್ಟು ಹೋಗಿರುತ್ತಾರೆ, ಅವರನ್ನು ಉಳಿಸಬೇಕೆಂದು ತಾನು ಯೆಹೋವನಿಗೆ ಬೇಡಿಕೊಂಡಿದ್ದರೂ ಅವರೆಲ್ಲಾ ನಾಶವಾದರೆಂದು ಭಾವಿಸಿಕೊಂಡಿರಬಹುದು. ಹಾಗಾಗಿರಲಿಲ್ಲ

ಎಂಬುದು ಬೈಬಲಿನ ಲೇಖಕನಿಗೆ ಗೊತ್ತಿತ್ತಾದರೂ, ತನ್ನ ತಮ್ಮನ ಮಗನು ಸುರಕ್ಷಿತನಾಗಿದ್ದಾನೆಂಬುದು ಅಬ್ರಹಾಮನಿಗೆ ಗೊತ್ತಿತ್ತೋ ಇಲ್ಲವೋ ಎಂಬುದನ್ನು ವಾಕ್ಯವು ತಿಳಿಸುವದಿಲ್ಲ.

**ವಚನ 29.** ಈ ವಿಭಾಗವು ಈಗಾಗಲೇ ಕಥಾನಿರೂಪಕನು ಪೂರ್ತಿಯಾಗಿ ತಿಳಿಸಿರುವ ಕಥೆಯ ಒಂದು ಸಾರಾಂಶದೊಂದಿಗೆ ಮುಕ್ತಾಯಗೊಳ್ಳುತ್ತದೆ. ಇದು 18:23-33ರಲ್ಲಿ ಅಬ್ರಹಾಮನು ಕೇಳಿದ್ದ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತದೆ. ನೀತಿವಂತರ ಪರವಾಗಿ ಮೂಲಪಿತೃವು ಮಾಡಿದ್ದ ವಿಜ್ಞಾಪನೆಯು ಫಲ ಕೊಟ್ಟಿತ್ತು. **ದೇವರು ಆ ಸೀಮೆಯ ಪಟ್ಟಣಗಳನ್ನು ನಾಶಮಾಡಿದಾಗ ಲೋಟನು ವಾಸವಾಗಿದ್ದ ಊರುಗಳನ್ನು ಕೆಡವಿದರೂ** ಆತನು **ಅಬ್ರಹಾಮನನ್ನು ನೆನಸಿ ಲೋಟನನ್ನು ತಪ್ಪಿಸಿ ಕಾಪಾಡಿದನು** ಎಂಬುದಾಗಿ ವಾಕ್ಯವು ಹೇಳುತ್ತದೆ. ಅಬ್ರಹಾಮನನ್ನು ನೆನಪಿಸಿಕೊಳ್ಳುವದರಲ್ಲಿ, ದೇವರು ಲೋಟನನ್ನು ನೆನಸಿದನು. ಮೂಲಪಿತೃವು ನೀತಿವಂತರನ್ನು ಉಳಿಸಬೇಕೆಂದು ಯೆಹೋವನಿಗೆ ಬೇಡಿಕೊಂಡದ್ದರ ನಿಮಿತ್ತವಾಗಿ ಅಬ್ರಹಾಮನ ತಮ್ಮನ ಮಗ ಮತ್ತು ಆತನ ಪುತ್ರಿಯರು ಉಳಿಸಲ್ಪಟ್ಟಿದ್ದರು. ಹೇಗೂ, ಅದಕ್ಕೆ ಕಾರಣವು ಲೋಟನ ನೀತಿಯು ಆಗಿರಲಿಲ್ಲ, ಆದರೆ ಅಬ್ರಹಾಮನ ನೀತಿಯೇ ಆಗಿತ್ತು, ಅದರ ನಿಮಿತ್ತ ದೇವರು ಲೋಟನ ಮತ್ತು ಆತನ ಕುಟುಂಬಕ್ಕೆ ಕರುಣೆಯನ್ನು ತೋರಿಸಿದನು. ಅವರಿಗೋಸ್ಕರ ವಿಜ್ಞಾಪನೆ ಮಾಡುವ ಮೂಲಕ, ಅವರು ಜೀವಿಸಿದ **ಊರುಗಳನ್ನು** "ಕೆಡವಿಹಾಕಲ್ಪಡುವದರಿಂದ" ತಪ್ಪಿಸಲ್ಪಡುವ ಆಶೀರ್ವಾದವು ಅಬ್ರಹಾಮನಿಗೆ ದೊರಕಿತ್ತು.

29ನೇ ವಚನವು ಅಬ್ರಹಾಮನ ಕಳವಳಗೊಂಡಿದ್ದ ಹೃದಯವನ್ನು ಸಮಾಧಾನಗೊಳಿಸುವದಕ್ಕಾಗಿ, ಅವನ ತಮ್ಮನ ಮಗನು ಸುರಕ್ಷಿತವಾಗಿದ್ದಾನೆಂಬ ಸುದ್ದಿಯನ್ನು ದೇವರು ಅವನಿಗೆ ತಿಳಿಯಪಡಿಸಿದನೆಂಬ ಸೂಚ್ಯಾರ್ಥವನ್ನು ನೀಡುತ್ತದೆ. ಹೇಗೂ, ವಾಕ್ಯವು ಇದನ್ನು ನಿರ್ದಿಷ್ಟವಾಗಿ ತಿಳಿಸುವದಿಲ್ಲ; ಮತ್ತು 19:30-38ರಲ್ಲಿ ಅವನ ಪುತ್ರಿಯರ ಸಂಗಡ ನಿಷಿದ್ಧ ರಕ್ತಸಂಬಂಧದ ಸಂಭೋಗವನ್ನು ನಡಿಸಿದ ಕಥನದ ಬಳಿಕ, ಲೋಟನು ಕಥೆಯಿಂದ ಕಣ್ಮರೆಯಾಗುತ್ತಾನೆ ಮತ್ತು ಆದಿಕಾಂಡದ ಪುಸ್ತಕದ ಉಳಿದ ಭಾಗದಲ್ಲಿ ಇನ್ನೆಂದಿಗೂ ಪುನಃ ಪ್ರಸ್ತಾಪಿಸಲ್ಪಡುವದಿಲ್ಲ.

## ತನ್ನ ಹೆಣ್ಣು ಮಕ್ಕಳೊಂದಿಗೆ ಲೋಟನ ಹಾದರತನ (19:30-38)

**30ಲೋಟನು ಚೋಗರಿನಲ್ಲಿರುವದಕ್ಕೆ ಅಂಜಿ ತನ್ನಿಬ್ಬರು ಹೆಣ್ಣು ಮಕ್ಕಳನ್ನು ಕರಕೊಂಡು ಬೆಟ್ಟವನ್ನು ಹತ್ತಿ ಅಲ್ಲಿ ವಾಸಮಾಡಿದನು. ಅವನೂ ಅವನ ಇಬ್ಬರು ಹೆಣ್ಣುಮಕ್ಕಳೂ ಒಂದು ಗವಿಯಲ್ಲಿ ವಾಸಿಸಿದರು. 31ಹೀಗಿರುವಲ್ಲಿ ಹಿರೀಮಗಳು ತನ್ನ ತಂಗಿಗೆ - ನಮ್ಮ ತಂದೆ ಮುದುಕನಷ್ಟೆ; ಸರ್ವಲೋಕದ ಪದ್ಧತಿಯ ಮೇರೆಗೆ ನಮ್ಮನ್ನು ಮದುವೆ ಮಾಡಿಕೊಳ್ಳುವ ಪುರುಷರು ಎಲ್ಲಿಯೂ ಇಲ್ಲ; 32ನಾವು ತಂದೆಗೆ ದ್ರಾಕ್ಷಾರಸವನ್ನು ಕುಡಿಸಿ, ಅವನ ಸಂಗಡ ಮಲಗಿಕೊಂಡು ತಂದೆಯಿಂದ ಸಂತಾನವನ್ನು ಪಡಕೊಳ್ಳೋಣ ಎಂದು ಹೇಳಿದಳು. 33ಆ ರಾತ್ರಿ ಅವರು ತಂದೆಗೆ ದ್ರಾಕ್ಷಾರಸವನ್ನು ಕುಡಿಸಿದಾಗ ಹಿರೀ ಮಗಳು ಅವನ ಸಂಗಡ ಮಲಗಿಕೊಂಡಳು; ಯಾವಾಗ ಮಲಗಿಕೊಂಡಳೋ ಯಾವಾಗ ಎದ್ದು ಹೋದಳೋ ಅವನಿಗೇನೂ ತಿಳಿಯಲಿಲ್ಲ. 34ಮಾರಣೇ ದಿನ ಹಿರಿಯವಳು ಕಿರಿಯವಳಿಗೆ - ನಿನ್ನೆಯ ರಾತ್ರಿ ನಾನೇ ಅಪ್ಪನ ಸಂಗಡ ಮಲಗಿಕೊಂಡೆನು; ಈ ರಾತ್ರಿಯೂ ಅವನಿಗೆ ದ್ರಾಕ್ಷಾರಸವನ್ನು ಕುಡಿಸೋಣ; ಆಮೇಲೆ ನೀನು ಅವನ ಸಂಗಡ ಮಲಗಿಕೋ; ಹೀಗೆ ನಮ್ಮ ತಂದೆಯಿಂದ**

**ಸಂತಾನವನ್ನು ಪಡೆದುಕೊಳ್ಳೋಣ ಎಂದು ಹೇಳಿದಳು. [35]ಆ ರಾತ್ರಿಯೂ ಅವರು ತಂದೆಗೆ ದ್ರಾಕ್ಷಾರಸವನ್ನು ಕುಡಿಸಿದ ಮೇಲೆ ಕಿರೀ ಮಗಳು ಅವನ ಸಂಗಡ ಮಲಗಿಕೊಂಡಳು; ಅವಳು ಯಾವಾಗ ಮಲಗಿದಳೋ ಯಾವಾಗ ಎದ್ದು ಹೋದಳೋ ಅವನಿಗೇನೂ ತಿಳಿಯಲಿಲ್ಲ. [36]ಹೀಗೆ ಲೋಟನ ಇಬ್ಬರು ಹೆಣ್ಣುಮಕ್ಕಳು ತಂದೆಯಿಂದ ಬಸುರಾದರು. [37]ಹಿರಿಯವಳು ಗಂಡು ಮಗುವನ್ನು ಹೆತ್ತು ಅದಕ್ಕೆ ಮೋವಾಬ್ ಎಂದು ಹೆಸರಿಟ್ಟಳು. ಇಂದಿನವರೆಗೂ ಇರುವ ಮೋವಾಬ್ಯರಿಗೆ ಅವನೇ ಮೂಲ ಪುರುಷನು. [38]ಕಿರೀ ಮಗಳು ಗಂಡು ಮಗುವನ್ನು ಹೆತ್ತು ಅದಕ್ಕೆ ಬೆನಮ್ಮಿ ಎಂದು ಹೆಸರಿಟ್ಟಳು. ಇಂದಿನವರೆಗೂ ಇರುವ ಅಮ್ಮೋನಿಯರಿಗೆ ಇವನೇ ಮೂಲ ಪುರುಷನು.**

**ವಚನ 30.** ಸೊದೋಮ ಮತ್ತು ಗೊಮೋರ ಪಟ್ಟಣಗಳ ನಾಶನದ ತರುವಾಯ, **ಲೋಟ** ಮತ್ತು ಆತನ ಕುಟುಂಬದಲ್ಲಿ ಉಳಿದವರು - **ತನ್ನಿಬ್ಬರು ಹೆಣ್ಣು ಮಕ್ಕಳು** - ತಮಗೋಸ್ಕರ ಒಂದು ಹೊಸ ಜೀವನವನ್ನು ಕಟ್ಟಿಕೊಳ್ಳಬೇಕಾಗಿತ್ತು. ದೇವರು ಲೋಟನ ಮನವಿಗೆ ಪ್ರತ್ಯುತ್ತರವಾಗಿ **ಚೋಗರ** ಎಂಬ ಊರನ್ನು ನಾಶನದಿಂದ ಉಳಿಸುವ ಮೂಲಕ ವಾಸಿಸುವದಕ್ಕಾಗಿ ಅವರಿಗೊಂದು ಸ್ಥಳವನ್ನು ಒದಗಿಸಿದ್ದನು. ಹೇಗೂ, ಅವರು ಈ ದೈವಿಕ ಏರ್ಪಾಡನ್ನು ಒಂದು ಸಮಸ್ಯೆಯಾಗಿ ಕಂಡರು, ಯಾಕೆಂದರೆ ಅವರು ತಮ್ಮ ಸ್ವಂತ ಯೋಜನೆಗಳನ್ನು ಮಾಡಿಕೊಂಡರು.

ಲೋಟನು ಸೊದೋಮನ್ನು ಬಿಟ್ಟು ಬರಲು ಹಿಂಜರಿದ ಮೇಲೆ ಮತ್ತು ಸುರಕ್ಷತೆಗೋಸ್ಕರ ಚೋಗರಿಗೆ ಓಡಿ ಹೋಗುವಂತೆ ಅನುಮತಿಸುವಂತೆ ದೂತರನ್ನು ಮನವೊಲಿಸಿದ ಬಳಿಕ, ಮೂಲತಃ ಅವರು ಆತನಿಗೆ ಮಾಡುವಂತೆ ಅಪ್ಪಣೆ ಕೊಟ್ಟಿದ್ದ ಸಂಗತಿಯನ್ನೇ ಮಾಡಲು ಆತನು ನಿರ್ಧರಿಸಿದ್ದನು. ಯಾವದೋ ಒಂದು ಅಸ್ಪಷ್ಟವಾದ ಕಾರಣಕ್ಕಾಗಿ, ಆತನು ತನ್ನ ಮನಸ್ಸನ್ನು ಬದಲಾಯಿಸಿಕೊಂಡನು ಮತ್ತು **ಬೆಟ್ಟವನ್ನು** ಹತ್ತಿ ಅಲ್ಲಿಗೆ ವಾಸಿಸಲು ಹೋದನು. ಆತನು ಏಕೆ **ಚೋಗರಿನಲ್ಲಿರುವದಕ್ಕೆ ಅಂಜಿದನು**, ಬದಲಾಗಿ **ಅವನೂ ಅವನ ಇಬ್ಬರು ಹೆಣ್ಣುಮಕ್ಕಳೂ ಒಂದು ಗವಿಯಲ್ಲಿ ವಾಸಿಸಲು** ಆರಿಸಿಕೊಂಡನೆಂದು ವಾಕ್ಯವು ತಿಳಿಸುವದಿಲ್ಲ. ಚೋಗರಿನ ಜನರು ಅವನನ್ನು ಮತ್ತು ಅವನ ಪುತ್ರಿಯರನ್ನು ತಿರಸ್ಕರಿಸಿದರೋ, ಅವರು ಶಪಿಸಲ್ಪಟ್ಟವರು ಮತ್ತು ಆ ಪ್ರದೇಶದಲ್ಲಿ ಬಂದಿದ್ದ ವ್ಯಾಪಕವಾದ ನಾಶನಕ್ಕೆ ಕಾರಣರೆಂದು ಭಾವಿಸಿಕೊಳ್ಳಲ್ಪಟ್ಟಿದ್ದರೋ? ಚೋಗರಿನ ಜನರು ತನಗೆ ಹಾನಿಯುಂಟು ಮಾಡಬಹುದು ಅಥವಾ ಆ ಊರಿನ ಮೇಲೆ ಸಹ ಯೆಹೋವನ ಕೋಪಾಗ್ನಿಯು ಸುರಿಸಲ್ಪಡುವದೆಂದು ಲೋಟನು ಹೆದರಿದ್ದನೋ?

ಶಾಸ್ತ್ರಗಳು ಈ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವದಿಲ್ಲ, ಆದರೆ ಲೋಟನು ನಿರಂತರವಾಗಿ ತಪ್ಪಾದ ನಿರ್ಧಾರಗಳನ್ನು ಮಾಡುತ್ತಿದ್ದನೆಂದು ತೋರುತ್ತದೆ. ಜೀವನೋಪಾಯವನ್ನು ನೋಡಿಕೊಳ್ಳುವುದು ಅತ್ಯಂಥ ಕಷ್ಟಕರ ಮತ್ತು ಹೆಚ್ಚೆಂದರೆ ಸ್ವಲ್ಪ ಕಾಲ ಮಾತ್ರವೇ ವಾಸಿಸಲು ಸಾಧ್ಯವಿದ್ದಂಥ ಬಂಜರು ಗವಿಯಲ್ಲಿ ಹೋಗಿ ಇರುವದರ ಬದಲಾಗಿ, ಆತನು ತನ್ನನ್ನು ತಗ್ಗಿಸಿಕೊಂಡು ಪೂರ್ವ ದಿಕ್ಕಿಗೆ ಹೋಗಿ ಅಬ್ರಹಾಮನೊಂದಿಗೆ ಜೀವನೋಪಾಯ ಮತ್ತು ಆಶ್ರಯವನ್ನು ಏಕೆ ಪಡೆದುಕೊಳ್ಳಲಿಲ್ಲ? ನಿಶ್ಚಯವಾಗಿಯೂ, ಅಷ್ಟೊಂದು ವರ್ಷಗಳ ಕಾಲ ಬೇರ್ಪಟ್ಟು ಇದ್ದ ಮೇಲೆ ಈತನು ಹಿಂದಿರುಗಿ ಹೋಗಿದ್ದರೆ ಅವನ ದೊಡ್ಡಪ್ಪನು ಸಂಭ್ರಮದಿಂದ ಸ್ವಾಗತಿಸಿರುತ್ತಿದ್ದನು ಎಂದು ಈತನಿಗೆ ಗೊತ್ತಿತ್ತು. ಅಷ್ಟೊತ್ತಿಗಾಗಲೇ ಅಬ್ರಹಾಮನು ಸತ್ತಿರಬೇಕೆಂದು ಲೋಟನು ಯೋಚಿಸಿದಾಗ್ಯೂ, ಈತನಿಗೂ ಸೊದೋಮಿನ ಜನರಿಗೂ ಮೂಡಣದ ನಾಲ್ಕು ಮಂದಿ ಅರಸರಿಂದ ಬಿಡಿಸಿ ಕಾಪಾಡಿದ ವೇಳೆ ಮೂಲಪಿತೃವು ತೋರಿಸಿದ ಉಪಕಾರವನ್ನು ಈತನು ನೆನಪಿಸಿಕೊಂಡಿರಬೇಕಾಗಿತ್ತು

(ನೋಡಿರಿ ಅಧ್ಯಾಯ 14). ಅಬ್ರಹಾಮನ ಜನರು ಲೋಟನಿಗೆ ಮತ್ತು ಅವನ ಪುತ್ರಿಯರಿಗೆ ಆಶ್ರಯವನ್ನು ಕೊಡುವ ಮೂಲಕ ಆತನು ತನ್ನ ತಮ್ಮನ ಮಗನ ಮೇಲೆ ಹೊಂದಿದ್ದ ಜ್ಞಾಪಕ ಮತ್ತು ಮಮತೆಯನ್ನು ನಿಶ್ಚಯವಾಗಿಯೂ ಗೌರವಿಸಿರುತ್ತಿದ್ದರು. ಲೋಟನು ಈ ವಿಧವಾದ ತೀರ್ಮಾನವನ್ನು ಮಾಡುವಂತೆ ಏನೇ ಕಾರಣವಾಗಿದ್ದರೂ ಸರಿಯೇ, ದುರಂತಕರ ಕಥೆಯು ಯೋರ್ದನ್ ಕಣಿವೆಯ ಪೂರ್ವ ದಿಕ್ಕಿಗಿದ್ದ ಒಂದು ಗವಿಯಲ್ಲಿ ಮುಂದುವರೆಯುತ್ತದೆ.

**ವಚನ 31.** ಲೋಟ ಮತ್ತು ಆತನ ಪುತ್ರಿಯರು ಗವಿಯಲ್ಲಿ ಎಷ್ಟು ಕಾಲದ ವರೆಗೆ ವಾಸಿಸಿದ ಬಳಿಕ **ಹಿರೀಮಗಳು ತನ್ನ ತಂಗಿಗೆ - ನಮ್ಮ ತಂದೆ ಮುದುಕನಷ್ಟೆ; ಸರ್ವಲೋಕದ ಪದ್ಧತಿಯ ಮೇರೆಗೆ ನಮ್ಮನ್ನು ಮದುವೆ ಮಾಡಿಕೊಳ್ಳುವ ಪುರುಷರು ಎಲ್ಲಿಯೂ ಇಲ್ಲ** ಎಂದು ಹೇಳಿದಳು ಎಂಬುದನ್ನು ಕಥಾನಿರೂಪಕನು ತಿಳಿಸುವದಿಲ್ಲ. "ಸರ್ವಲೋಕ" ಎಂಬುದಾಗಿ ಈ ವಾಕ್ಯದಲ್ಲಿರುವ ಪದವು ಅನೇಕ ಸಾರಿ ಲೋಟನ ಹಿರೀಮಗಳು ಇಡೀ ಲೋಕದಲ್ಲಿ ಈಗ ಉಳಿದಿರುವ ಪುರುಷನೆಂದರೆ ತನ್ನ ತಂದೆಯೊಬ್ಬನೇ ಎಂಬುದಾಗಿ ಭಾವಿಸಿಕೊಂಡಿದ್ದಳು ಎಂಬ ಅರ್ಥವನ್ನು ಕೊಡುತ್ತದೆಂದು ಅಪಾರ್ಥಮಾಡಿಕೊಳ್ಳಲ್ಪಟ್ಟಿರುತ್ತದೆ. ಈ ಅರ್ಥನಿರೂಪನೆಯ ಪ್ರಕಾರ, ಈಕೆ ಮತ್ತು ಈಕೆಯ ತಂಗಿಯು ತಮಗೆ ಗಂಡಂದಿರುವ ಸಿಕ್ಕುವ ನಿರೀಕ್ಷೆಯೇ ಇರುವದಿಲ್ಲ ಮತ್ತು ಭೂಮಿಯ ಮೇಲೆ ಪುನಃ ಸಂತಾನೋತ್ಪತ್ತಿಯನ್ನು ಮಾಡುವದಕ್ಕೆ ಬೇರೆ ಇನ್ನಾವ ದಾರಿಯೂ ಇರುತ್ತಿರಲಿಲ್ಲ ಎಂದಾಗುತ್ತದೆ.

ಇಬ್ರಿಯ ಪದವಾದ אֶרֶץ *(ಎರೆಟ್ಸ್)* ಎಂಬುದರ ಅರ್ಥವು ಸರ್ವಲೋಕ ಎಂಬ ಅರ್ಥವಾಗಬಲ್ಲದು ಎಂಬುದು ನಿಜವೇ ಆಗಿದೆಯಾದರೂ, 31ನೇ ವಚನದಲ್ಲಿ ಅದರ ಉತ್ತಮವಾದ ಅನುವಾದವೆಂದರೆ "ಈ ದೇಶದಲ್ಲಿ" ಎಂಬುದೆ, ಇದರರ್ಥವು "ಈ ಪ್ರಾಂತ್ಯದಲ್ಲಿ" ಅಥವಾ "ಈ ಸುತ್ತಲಿನ ಪ್ರದೇಶದಲ್ಲಿ" (NIV) ಎಂದಾಗಿರುತ್ತದೆ. ಇದು ಇಡೀ ಭೂಮಿ ಎಂಬ ಸೂಚ್ಯಾರ್ಥವನ್ನು ಹೊಂದಿರಲಿಕ್ಕೆ ಸಾಧ್ಯವಿಲ್ಲ ಯಾಕೆಂದರೆ ಚೋಗರಿನಲ್ಲಿ ವಾಸಿಸುತ್ತಿದ್ದ ಜನರು ಉಳಿಸಲ್ಪಟ್ಟಿದ್ದರು. ಅದರ ಜೊತೆಗೆ, ದೂತರು ಮಾಡಬೇಕೆಂದಿದ್ದ ವಿನಾಶದ ಅಪಾಯವು ಸೊದೋಮ ಮತ್ತು ಯೋರ್ದನ್ ಕಣಿವೆಯ ಇತರ ಪಟ್ಟಣಗಳ ವಿರುದ್ಧ ಮಾತ್ರವೇ ಆಗಿತ್ತಾದ್ದರಿಂದ, ಭೂಮಿಯಲ್ಲಿರುವ ಜನರೆಲ್ಲರೂ ನಿರ್ಮೂಲಗೊಳಿಸಲ್ಪಟ್ಟಿದ್ದಾರೆಂದು ಲೋಟನ ಪುತ್ರಿಯರು ಊಹಿಸಿಕೊಳ್ಳುವದಕ್ಕೆ ಯಾವ ಕಾರಣವೂ ಇರಲಿಲ್ಲ.

**ವಚನ 32.** ಈ ಹಿಂದಿನ ಸಂದರ್ಭಗಳಲ್ಲಿ ತನ್ನ ತಂದೆಯು ಮಾಡಿದ್ದ ತಪ್ಪಾದ ನಿರ್ಧಾರಗಳಂತೆಯೇ, ಈಗ ಆತನ ಹಿರೀಮಗಳು ಮಾಡಿದ್ದಳು: ಅಮಲೇರುವಂತೆ **ನಾವು ತಂದೆಗೆ ದ್ರಾಕ್ಷಾರಸವನ್ನು ಕುಡಿ**ಸೋಣ ಎಂದು ಆಕೆಯು ತನ್ನ ತಂಗಿಗೆ ಹೇಳಿದಳು (ನೋಡಿರಿ 9:20, 21). ತರುವಾಯ, ಆತನು ಕುಡಿದ ಮತ್ತಿನಲ್ಲಿ ಮಲಗಿಕೊಂಡಿರುವ ವೇಳೆ, **ಅವನ ಸಂಗಡ ಮಲಗಿಕೊಂಡು** (ಲೈಂಗಿಕ ಸಂಬಂಧಕ್ಕೆ ಬಳಸುವ ಸೌಮ್ಯೋಕ್ತಿ) **ತಂದೆಯಿಂದ** [ನಮ್ಮ] **ಸಂತಾನವನ್ನು ಪಡಕೊಳ್ಳೋಣ** ಎಂದು ಯೋಜನೆಯ ಮಾಡಿದಳು. ಕೆಲವು ವೇದ ಪಂಡಿತರು ಆಕೆಯ ಈ ಅಭಿಪ್ರಾಯವನ್ನು ಸಮರ್ಥಿಸುತ್ತಾ ಅವರು ತಮಗೆ ಬೇರೆ ದಾರಿಯೇ ಇಲ್ಲ ಎಂದು ತೋರಿದ ಪರಿಸ್ಥಿತಿಯಲ್ಲಿ ಅವರ ಈ ಉದ್ದೇಶಗಳು ಗೌರವಪೂರ್ಣವಾಗಿದ್ದವೆಂದು ಹೇಳುತ್ತಾರಾದರೂ, 2:18-24ರಲ್ಲಿ ತಿಳಿಸಲ್ಪಟ್ಟಿರುವ ಮದುವೆ ಕುರಿತಾದ ಅತ್ಯುನ್ನತ ಅಭಿಪ್ರಾಯ ಮತ್ತು ಮೋಶೆಯ ಧರ್ಮಶಾಸ್ತ್ರದೊಳಗೆ ಅನಂತರದಲ್ಲಿ ರಕ್ತಸಂಬಂಧಿಗಳ ಸಂಗಡದ ಸಂಭೋಗವನ್ನು ನಿಷೇಧಿಸಿದ್ದರ ಬೆಳಕಿನಲ್ಲಿ ಇಂಥ ಕೃತ್ಯಗಳನ್ನು ಎಂದಿಗೂ ಸಮರ್ಥಿಸಲು ಸಾಧ್ಯವಿಲ್ಲ (ಯಾಜಕಕಾಂಡ 18:6). ಅಷ್ಟುಮಾತ್ರವಲ್ಲದೆ, ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಅನುಸರಿಸಿದ ದಾರಿಗಳು ಅಸಹ್ಯಕರವಾಗಿರುತ್ತವೆ ಯಾಕೆಂದರೆ

ಅದರೊಳಗೆ ಅಪ್ರಮಾಣಿಕತೆ ಮತ್ತು ವಂಚನೆಗಳು ಸೇರಿದ್ದವು. ತಮ್ಮ ತಂದೆಯು ತಮ್ಮೊಂದಿಗೆ ಸಂಭೋಗವನ್ನು ನಡಿಸಬೇಕಿದ್ದರೆ ನಾವು ಮೊದಲು ಅವನಿಗೆ ಅಮಲೇರುವಂತೆ ವಂಚಿಸಬೇಕಾಗುತ್ತದೆಂದು ಈ ಅಕ್ಕತಂಗಿಯರಿಗೆ ಗೊತ್ತಿತ್ತಾದ್ದರಿಂದ ತಾವು ಮಾಡುವದು ತಪ್ಪು ಎಂಬುದು ಅವರಿಗೆ ಅರ್ಥವಾಗಿತ್ತು. ಹೇಗೂ, ಈ ವಿಷಯದಲ್ಲಿ ಲೋಟನು ಯಾವ ತಪ್ಪೂ ಇರುವದಿಲ್ಲ ಎಂದು ಹೇಳಲಿಕ್ಕಾಗುವದಿಲ್ಲ. ಅವನು ಅತಿಯಾಗಿ ದ್ರಾಕ್ಷಾರಸವನ್ನು ಕುಡಿಯುವವನೆಂಬುದು ಪುತ್ರಿಯರಿಗೆ ಗೊತ್ತಿತ್ತದೆಂದು ಸ್ಪಷ್ಟವಾಗಿರುತ್ತದೆ, ಮತ್ತು ಇದು ಸಹ ಆತನ ದುರ್ಬಲ ಗುಣಸ್ವಭಾವ ಮತ್ತು ಪ್ರಭಾವವನ್ನು ಸೂಚಿಸುತ್ತದೆ.

**ವಚನ 33.** ಈ ತುಚ್ಛವಾದ ಸಂಬಂಧದ ಕುರಿತಾಗಿ ಹೆಚ್ಚಿನ ವಿವರಗಳು ಕೊಡಲ್ಪಟ್ಟಿಲ್ಲ, ಪುತ್ರಿಯರು **ತಂದೆಗೆ ದ್ರಾಕ್ಷಾರಸವನ್ನು ಕುಡಿಸಿ** ಆತನೊಂದಿಗೆ ಸಂಭೋಗವನ್ನು ನಡಿಸಿದಾಗ **ರಾತ್ರಿ** ಆಗಿತ್ತು ಎಂಬುದನ್ನಷ್ಟೆ ತಿಳಿಸಲಾಗಿರುತ್ತದೆ. ಆತನು ಕುಡಿದ ಮತ್ತಿನಲ್ಲಿರುವ ವೇಳೆ, **ಹಿರೀ ಮಗಳು ಅವನ ಸಂಗಡ ಮಲಗಿಕೊಂಡು** ಲೈಂಗಿಕ ಸಂಬಂಧವನ್ನು ಹೊಂದಿದಳು, ಮತ್ತು **ಯಾವಾಗ ಮಲಗಿಕೊಂಡಳೋ ಯಾವಾಗ ಎದ್ದು ಹೋದಳೋ ಅವನಿಗೇನೂ ತಿಳಿಯಲಿಲ್ಲ**. ಸರಳವಾಗಿ ಹೇಳುವದಾದರೆ, ಏನು ಸಂಭವಿಸಿತೆಂಬ ಅರಿವು ಅವನಿಗಿರಲಿಲ್ಲ.

**ವಚನಗಳು 34, 35.** ಪುನಃ, ಎರಡನೆಯ ರಾತ್ರಿಯಲ್ಲಿ, ಲೋಟನಿಗೆ ಕುಡಿಸಿ ಅಮಲೇರಿಸುವ ತಂತ್ರವನ್ನು ಪುನರಾವರ್ತಿಸಿದರು, ಹೀಗೆ **ಕಿರಿಯ** ಮಗಳು **ಅವನ ಸಂಗಡ ಮಲಗಿ** ಲೈಂಗಿಕ ಸಂಬಂಧವನ್ನು ಹೊಂದಬೇಕೆಂದಾಗಿತ್ತು. ಈ ಹಿಂದೆ ನಡೆದ ಪ್ರಕಾರವೇ, **ಅವಳು ಯಾವಾಗ ಮಲಗಿದಳೋ ಯಾವಾಗ ಎದ್ದು ಹೋದಳೋ ಅವನಿಗೇನೂ ತಿಳಿಯಲಿಲ್ಲ**, ಮತ್ತು ಈ ಕಾರಣದಿಂದ ಏನು ನಡೆಯಿತೆಂಬುದು ಅವನಿಗೆ ಗೊತ್ತಾಗಲಿಲ್ಲ. ಅವರು ಅವನಿಗೆ **ದ್ರಾಕ್ಷಾರಸ**ವನ್ನು ಕೊಟ್ಟರು ಅಥವಾ **ಕುಡಿ** ಎಂದು ಪ್ರೋತ್ಸಾಹಿಸಿದರು ಎಂದಾಗಲಿ ವಾಕ್ಯವು ತಿಳಿಸುವದಿಲ್ಲ; ಆತನು ಅಮಲೇರಿದವನಾಗುವಂತೆ ಅವರು ಅದನ್ನು ಅತಿಯಾಗಿ **ಕುಡಿಸಿದರು** ಎಂದು ಹೇಳಲಾಗಿರುತ್ತದೆ. ಅವರು ಸತತ ಎರಡು ರಾತ್ರಿಗಳಲ್ಲಿ ಇದನ್ನು ಮಾಡುವದಕ್ಕೆ ಸಫಲರಾದರು. ಲೋಟನು ಈ ಇಡೀ ಘಟನಾವಳಿಯಲ್ಲಿ ತಟಸ್ಥನಾಗಿರುವ ದುರ್ಬಲ ವ್ಯಕ್ತಿಯಂತೆ, ತನ್ನ ಪುತ್ರಿಯರು ಅತಿಯಾಗಿ ದ್ರಾಕ್ಷಾರಸವನ್ನು ಕುಡಿಯುವಂತೆ ಮಾಡಿದಾಗ ಪ್ರತಿರೋಧಿಸಲು ಅಶಕ್ತನಾಗಿ ಮತ್ತು ಲೈಂಗಿಕವಾಗಿ ಅವರು ಅವನನ್ನು ದುರ್ಬಳಕೆ ಮಾಡಿಕೊಂಡ ವೇಳೆ ಏನಾಯಿತೆಂಬುದರ ಬಗ್ಗೆ ಸಂಪೂರ್ಣ ಗೊತ್ತಿಲ್ಲದವನಾಗಿ ಕಾಣಿಸುತ್ತಾನೆ.

ಈ ಸಂಚನ್ನು ಸಾಧಿಸುವದಕ್ಕಾಗಿ, ಒಂದು ಬೆಟ್ಟದಲ್ಲಿನ ಗವಿಯಲ್ಲಿ ಅಡಗಿಕೊಂಡಿದ್ದಂಥ ವೇಳೆಯಲ್ಲಿ ಪುತ್ರಿಯರು ಸಾಕಷ್ಟು ದ್ರಾಕ್ಷಾರಸವನ್ನು ಎಲ್ಲಿಂದ ಪಡೆದುಕೊಂಡರು ಎಂಬುದು ನಮಗೆ ತಿಳಿಯದು. ಸೊದೋಮ ಮತ್ತು ಗೊಮೋರ ಪಟ್ಟಣಗಳ ಜೊತೆಯಲ್ಲಿ ಅದರ ಅಕ್ಕಪಕ್ಕದ ದ್ರಾಕ್ಷಾರಸ ಮತ್ತು ದ್ರಾಕ್ಷಾತೋಟಗಳು ನಾಶಗೊಳಿಸಲ್ಪಡದೆ ಇದ್ದಿದ್ದಲ್ಲಿ, ಆ ಪ್ರಾಂತ್ಯದಲ್ಲಿ ಜನರು ಈಗಲೂ ಜೀವಂತವಾಗಿದ್ದರು ಎಂದಾಗುತ್ತದೆ. ಹಾಗೆ ಅವರು ಜೀವಂತವಾಗಿರುವುದು ನಿಜವಾದಲ್ಲಿ, ಈ ಮಹಿಳೆಯರು ತಮ್ಮ ತಂದೆಯಿಂದ ಸಂತಾನವನ್ನು ಪಡೆಯಬೇಕೆಂಬ ಇಡೀ ವಂಚನೆಯ ಯೋಜನೆಯು ಅನಾವಶ್ಯಕವಾಗುತ್ತದೆ.

**ವಚನ 36.** ಲೋಟನೊಂದಿಗೆ ರಕ್ತಸಂಬಂಧಿಗಳಿಂದ ನಡೆದ ಹಾದರತ್ವದ ಲೈಂಗಿಕ ಸಂಬಂಧದ ಫಲಿತವು ಏನಾಗಿತ್ತದೆಂದರೆ ... **ಇಬ್ಬರು ಹೆಣ್ಣುಮಕ್ಕಳು ತಂದೆಯಿಂದ ಮಗುವನ್ನು ಹೊಂದಿದ್ದರು** - ಅಂದರೆ ಅವರು "ಬಸುರಾಗಿದ್ದರು" (NIV). ಅವರು ನಡೆದ ಘಟನೆಯ ಕುರಿತು ಲೋಟನಿಗೆ ಯಾವಾಗ ಅಥವಾ ಹೇಗೆ ತಿಳಿಸಿದರು ಮತ್ತು ಅವರ ಕೂಸುಗಳಿಗೆ ತಂದೆಯು ಈತನೇ ಎಂಬುದರ ಕುರಿತು ಯಾವ ಮಾಹಿತಿಯೂ ಕೊಡಲ್ಪಟ್ಟಿರುವದಿಲ್ಲ.

**ವಚನಗಳು 37, 38.** ಈ ಅಧ್ಯಾಯದಲ್ಲಿ ಕಡೆಯ ಎರಡು ವಚನಗಳು ಇಸ್ರಾಯೇಲ್ಯರ ನೆರೆಯ ಜನಾಂಗಗಳ ವಂಶಾವಳಿಯು ಯಾವದೆಂಬುದನ್ನು ಗುರುತಿಸುವದರಲ್ಲಿ ಲೇಖಕನಿಗಿರುವ ಆಸಕ್ತಿಯನ್ನು ಪ್ರತಿಬಿಂಬಿಸುತ್ತವೆ (ಹೋಲಿಕೆ ಮಾಡಿರಿ 10:1-32; 25:12-18; 36:1-43). ಲೋಟನ ಕಥೆಯು ಅವನ **ಹಿರೀ** ಮಗಳು ಒಬ್ಬ **ಗಂಡು ಮಗುವನ್ನು** ಹಡೆಯುವದರೊಂದಿಗೆ ಅಂತ್ಯಗೊಳ್ಳುತ್ತದೆ. ಆ ಮಗುವಿಗೆ **ಮೋವಾಬ** ಎಂದು ಹೆಸರಿಡಲಾಯಿತು, ಆ ಹೆಸರಿನ ಅರ್ಥವು "ತಂದೆಯಿಂದ ಬಂದವನು"[17] ಎಂದಾಗಿದೆ. ಈತನು **ಮೋವಾಬ್ಯರಿಗೆ ಮೂಲ ಪುರುಷ** ಆದನು.

ಅದೇ ರೀತಿಯಲ್ಲಿಯೇ, **ಕಿರೀ** ಮಗಳು ಒಬ್ಬ **ಗಂಡು ಮಗುವನ್ನು** ಹೆತ್ತು ಅವನಿಗೆ **ಬೆನಲ್ಲಿ** ಎಂದು ಹೆಸರಿಟ್ಟಳು. "ಬೆನಮ್ಮಿ" ಎಂದರೆ "ನನ್ನ ಜನರ ಮಗನು" ಎಂದರ್ಥ. ಹೇಗೂ, ಅದು ಬಹುಶಃ "ನನ್ನ ರಕ್ತಸಂಬಂಧಿಯ ಮಗನು" ಎಂದು ಅನುವಾದಿಸಲ್ಪಡತಕ್ಕದ್ದು, ಇಲ್ಲಿ ಒಬ್ಬ ಪುರುಷ ಸಂಬಂಧಿಯ ಮೇಲೆ, ಒಬ್ಬ "ಪಿತೃವಿನ ಕಡೆಯ ಸಂಬಂಧಿ"[18] ಮೇಲೆ ಒತ್ತು ಇರುತ್ತದೆ. ಇವನು **ಅಮ್ಮೋನಿಯರಿಗೆ ಮೂಲ ಪುರುಷ** ಆದನು.

**ಇಂದಿನವರೆಗೂ** ಎಂಬ ಮಾತು ಲೇಖಕನು ಮೋಶೆಯೇ ಆಗಿದ್ದಾನೆ ಎಂಬ ವಾದಕ್ಕೆ ಪುಷ್ಟಿಯನ್ನು ಕೊಡುತ್ತದೆ. ಇದು ಇಸ್ರಾಯೇಲ್ಯರು ಕಾನಾನ್ ದೇಶದ ಮೇಲೆ ಆಕ್ರಮಣ ಮಾಡುವದಕ್ಕೆ ಮತ್ತು ಅನಂತರದಲ್ಲಿ ಮೋವಾಬ್ಯ ಮತ್ತು ಅಮ್ಮೋನ್ಯರ ರಾಜ್ಯಗಳನ್ನು ಸ್ವಾಧೀನಪಡಿಸಿಕೊಳ್ಳುವದಕ್ಕೆ ಮುಂಚೆ ಸಂಭವಿಸಿರಬಹುದಾಗಿದೆ.

ಅವರ ಹುಟ್ಟುವಿಕೆಯ ಮೇಲೆ ನಿಷಿದ್ಧ ರಕ್ತಸಂಬಂಧಿ ಹಾದರ ಮೋಡವು ನೇತಾಡುತ್ತಿದ್ದ ಹೊರತಾಗಿಯೂ, ಈ ಇಬ್ಬರು ಪುತ್ರರ ವಿಷಯವಾಗಿ ಚರಿತ್ರೆಯು ಹೀನೈಸಿ ಮಾತಾಡುವದಿಲ್ಲ. ಲೇಖಕನಿಗೆ ತನ್ನ ವಾಚಕರ ನೈತಿಕ ಅಭಿಪ್ರಾಯಗಳು ಗೊತ್ತಿದ್ದವು, ಆದ್ದರಿಂದ ಪುತ್ರಿಯ ನಡವಳಿಕೆಯ ಕುರಿತು ಅಸಮ್ಮತಿಯಿರುತ್ತದೆಂಬುದು ಊಹಿಸಿಕೊಳ್ಳಲ್ಪಟ್ಟದ್ದಾಗಿತ್ತು. ಹಾಗಿದ್ದರೂ, ಅನೇಕ ಸಂತತಿಗಳ ತರುವಾಯ ಇಸ್ರಾಯೇಲ್ಯರು ಅರಣ್ಯದಲ್ಲಿದ್ದ ವೇಳೆ, ದೇವರು ಮೋಶೆಗೆ ಮೋವಾಬ್ಯರ ಅಥವಾ ಅಮ್ಮೋನಿಯರ ಮೇಲೆ ದಾಳಿ ಮಾಡಬಾರದೆಂದು ಅಪ್ಪಣೆ ಕೊಟ್ಟನು ಯಾಕೆಂದರೆ ಆತನು ಅವರಿಗೆ ಲೋಟನ ಸಂತತಿಯವರಾಗಿ ದೇಶದ ಒಂದು ಭಾಗವನ್ನು ಅನುಗ್ರಹಿಸಿದ್ದನು (ಧರ್ಮೋಪದೇಶಕಾಂಡ 2:9, 19). ಅನಂತರದಲ್ಲಿ ಮಾತ್ರವೇ, ಇಸ್ರಾಯೇಲ್ಯರು ಅವರ ದೇಶಗಳ ಮಾರ್ಗದಲ್ಲಿ ಹಾದು ಕಾನಾನಿಗೆ ಪ್ರಯಾಣಿಸುವ ವೇಳೆ ಇವರು ಸತ್ಕಾರವನ್ನು ಮಾಡುವದಕ್ಕೆ ನಿರಾಕರಿಸಿದಾಗಷ್ಟೆ ಲೋಟನ ಸಂತತಿಯವರ ವಿರುದ್ಧವಾಗಿ ಹತೆತನವು ಉದ್ಭವವಾಗಿತ್ತು (ಧರ್ಮೋಪದೇಶಕಾಂಡ 23:3, 4).

ಬಳಿಕ, ಮೋವಾಬ್ಯರ ಅರಸನಾದ ಬಾಲಾಕನು, ಯುದ್ಧದಲ್ಲಿ ತಾನು ಇಸ್ರಾಯೇಲ್ಯರನ್ನು ಸೋಲಿಸುವಂತಾಗುವ ಹಾಗೆ ಬಂದು ಅವರನ್ನು ಶಪಿಸುವಂತೆ ಬಿಳಾಮನನ್ನು ಹಣ ಕೊಟ್ಟು ಕರೆಯಿಸಿದನು (ಅರಣ್ಯಕಾಂಡ 22-24). ಅವನ ಸಂಚು ವಿಫಲವಾದಾಗ, ಮೋವಾಬಿನ ಸ್ತ್ರೀಯರು ಅನೈತಿಕವಾಗಿ ಲೈಂಗಿಕ ಸಂಬಂಧಗಳಲ್ಲಿಟ್ಟುಕೊಳ್ಳುವಂತೆ ಮತ್ತು ವಿಗ್ರಹಾರಾಧನೆ ಮಾಡುವಂತೆ ಅನೇಕ ಇಸ್ರಾಯೇಲ್ಯರನ್ನು ಮೋಹಗೊಳಿಸಿದರು, ಇದರಿಂದ ಅವರ ಮೇಲೆ ದೇವರ ನ್ಯಾಯತೀರ್ಪು ಇಳಿದು ಬರುವಂತಾಗಿತ್ತು (ಅರಣ್ಯಕಾಂಡ 25:1-9).

ಮೋಶೆಯ ಕಾಲದ ಬಳಿಕ ಮತ್ತು ಹಳೆಯ ಒಡಂಬಡಿಕೆಯ ಇತಿಹಾಸದ ಬಹುತೇಕ ಭಾಗದುದ್ದಕ್ಕೂ, ಮೋವಾಬ್ಯರು ಮತ್ತು ಅಮ್ಮೋನಿಯರ ಸಂಗಡ ಇಸ್ರಾಯೇಲ್ಯರ ಸಂಬಂಧವು ನಿರಂತರವಾಗಿ ಹಗೆತನಗಳಿಂದ ಕೂಡಿದ್ದಾಗಿತ್ತು (ನೋಡಿರಿ ನ್ಯಾಯಸ್ಥಾಪಕ 3:12-30; 10:6-11:33; 1 ಸಮುವೇಲ 11:1-11; 2 ಸಮುವೇಲ 10:1-14; 2 ಅರಸು 3:4-27; ಚೆಪನ್ಯ 2:8-11).

ಎಲ್ಲಕ್ಕಿಂತಲೂ ಹೆಚ್ಚು ದುರಂತಕರವಾದದ್ದು ಯಾವದೆಂದರೆ ಸೊಲೊಮೋನ ಮತ್ತು ಇಸ್ರಾಯೇಲ್ಯರ ಅನಂತರದಲ್ಲಿನ ಅರಸರು ಆ ಜನರ ದೇವರುಗಳನ್ನು ಮತ್ತು ಇನ್ನಿತರ ದೇವರುಗಳನ್ನು ಆರಾಧಿಸುವಂತೆ ಆಕರ್ಷಿಸಲ್ಪಟ್ಟರು, ಇದು ದೇವರ ಜನರಲ್ಲಿ ವಿಭಜನೆಯಾಗುವಂತೆ ಮತ್ತು ಎರಡೂ ರಾಜ್ಯಗಳ ಅವನತಿಗೆ ಕಾರಣವಾಗಿತ್ತು (ನೋಡಿರಿ 1 ಅರಸು 11:5-11; 2 ಅರಸು 16:1-4; 17:6-18; 21:1-16; 23:10-13; 24:1-4).

# ಅನ್ವಯಿಸುವಿಕೆ

## ಲೋಕದ ಸಂಗಡ ಒಡನಾಟವನ್ನಿಟ್ಟುಕೊಳ್ಳುವದರ ದುರಂತ (19:1-29)

19ನೇ ಅಧ್ಯಾಯವು ಅಬ್ರಹಾಮನಿಂದ ಬೇರ್ಪಟ್ಟ ಬಳಿಕ ಲೋಟನ ಆತ್ಮೀಕ ಅವನತಿಯಿಂದಾದ ದುರಂತಕರವಾದ ಪರಿಣಾಮಗಳನ್ನು ಬಣ್ಣಿಸುತ್ತದೆ. ಆತನು ಮೃತ ಸಮುದ್ರದ ಸಮೀಪವಿರುವ ಫಲವತ್ತಾದ ಯೋರ್ದನ್ ಕಣಿವೆಯ ಕಾರಣದಿಂದಾಗಿ ಸೊದೋಮಿನ ಕಡೆಯಲ್ಲಿ ತನ್ನ ಗುಡಾರವನ್ನು ಹಾಕಿಕೊಳ್ಳುವದಕ್ಕೆ ತೀರ್ಮಾನಿಸಿದಂಥ ಒಂದು ನಿಷ್ಕಪಟವೆಂದು ತೋರುವ ದಾರಿಯಲ್ಲಿ ಇದು ಆರಂಭಗೊಂಡಿತ್ತು (13:10-13). ಲೋಟನು ಅಲ್ಲಿ ವಾಸಿಸುವ ಜನರ ದುಷ್ಟತನದ ಕುರಿತಾಗಿ ಕೇಳಿಸಿಕೊಂಡಿದ್ದನೋ? ಅಬ್ರಹಾಮನು ಐಗುಪ್ತಕ್ಕೆ ಸ್ಥಳಾಂತರಗೊಳ್ಳುವದಕ್ಕೆ ಮುನ್ನ ಅಲ್ಲಿರುವ ಕೆಲವರ ದುರಾಚಾರಗಳ ಕುರಿತಾಗಿ ವರದಿಗಳನ್ನು ಪಡೆದುಕೊಂಡಿದ್ದನಾದ್ದರಿಂದ (12:10-13), ಆತನು ಮತ್ತು ಅತನ ತಮ್ಮನ ಮಗನು ಸಮೀಪದಲ್ಲಿ ವಾಸಿಸುವ ಸೊದೋಮಿನ ಜನರ ಪಾಪಗಳ ಕುರಿತು ಸಹ ಸುದ್ದಿಯನ್ನು ಕೇಳಿಸಿಕೊಂಡಿದ್ದರೆಂಬುದು ತಾರ್ಕಿಕವೆಂದು ಕಾಣುತ್ತದೆ. ಅಬ್ರಹಾಮನು ತನಗೆ ಐಗುಪ್ತದಲ್ಲಿ ತಪ್ಪು ಅಭಿಪ್ರಾಯದಿಂದಾಗಿ ನಡೆದ ಅನುಭವದಿಂದ ಪಾಠವನ್ನು ಕಲಿತುಕೊಂಡನೆಂದು ಸ್ಪಷ್ಟವಾಗಿರುತ್ತಾದರೂ, ಲೋಟನು ತನ್ನ ನಿರ್ಧಾರದಿಂದಾದ ದುರಂತಕರ ಪರಿಣಾಮಗಳ ಕಡೆಗೆ ಕಾಲ ಮಿಂಚಿ ಹೋಗುವ ತನಕವೂ ಕಣ್ಣು ಮುಚ್ಚಿಕೊಂಡು ಇದ್ದಿರಬಹುದಾಗಿದೆ. ಈ ಕಥನದಿಂದ, ಭಕ್ತಿಯುಳ್ಳ ಪ್ರಭಾವದಿಂದ ನಮ್ಮನ್ನು ಬೇರ್ಪಡಿಸಿಕೊಂಡು ಪರ್ಯಾಯವಾದದ್ದನ್ನು ಆರಿಸಿಕೊಳ್ಳುವದರಿಂದಾಗುವ ದೊಡ್ಡ ಗಂಡಾಂತರವು ಏನೆಂಬುದನ್ನು ನಾವು ಕಲಿತುಕೊಳ್ಳಬಹುದಾಗಿದೆ (1 ಕೊರಿಂಥ 15:33).

*ದುಷ್ಟ ಸಹವಾಸವು ಒಳ್ಳೇ ನೈತಿಕತೆಗಳನ್ನು ಕೆಡಿಸುತ್ತದೆ.* ಬೇರೆಯವರಿಂದ ಪ್ರಭಾವಕ್ಕೊಳಗಾಗುವದರಿಂದ ಯಾರೂ ಹೊರತಾಗಿರುವದಿಲ್ಲ. ಆರಂಭದಲ್ಲಿ, ಲೋಟನು ಅಬ್ರಹಾಮನ ಸಂಗಡ ತನಗಿದ್ದ ಸಂಬಂಧದಿಂದ ಬೇರ್ಪಡಿಸಿಕೊಂಡು ಸೊದೋಮಿನ ಸಮೀಪವಾಗಿ ಯೋರ್ದನ್ ಕಣಿವೆಯಲ್ಲಿ ವಾಸಿಸುವದಕ್ಕೆ ಸ್ಥಳಾಂತರಗೊಂಡಾಗ ಬೇರೆಯವರ ಪ್ರಭಾವಕ್ಕೆ ನಾನು ಒಳಗಾಗಲಾರೆನು ಎಂಬ ಈ ಭ್ರಮೆಯನ್ನು ಹೊಂದಿರಬಹುದಾಗಿದೆ. ಆತನು ಪಟ್ಟಣದೊಳಗೆ ಹೋಗಿ ವಾಸಿಸುವ ವೇಳೆ ಜನರ ಅನೈತಿಕ ಆಚಾರಗಳ ಪ್ರಭಾವಕ್ಕೆ ಒಳಗಾಗಲಿಲ್ಲ ಎಂಬ ಅರ್ಥದಲ್ಲಿ, ಪೇತ್ರನು ಈತನನ್ನು "ನೀತಿವಂತ" ಎಂದು ಕರೆಯುತ್ತಾನೆ. ಹೇಗೂ, ಅಂಥ ದುಷ್ಟತನವನ್ನು ನೋಡಿ ಈತನು ಆತ್ಮವು ಭಾರಗೊಂಡಿತ್ತು ಮತ್ತು "ದಿನೇ ದಿನೇ ತನ್ನ ... ಆತ್ಮದಲ್ಲಿ ಬಹಳವಾಗಿ ಕರಕರೆಗೊಂಡನು" (2 ಪೇತ್ರ 2:7, 8).

ಲೋಟನು ಮೊದಲ ಬಾರಿಗೆ ಅಬ್ರಹಾಮನ ಮಧ್ಯಪ್ರವೇಶಿಸುವಿಕೆ ಮೂಲಕ ತಪ್ಪಿಸಿ ಕಾಪಾಡಲ್ಪಟ್ಟ ವೇಳೆ, ಈತನು ಸೆರೆಯಾಗಿ ಕೊಂಡೊಯ್ಯಲ್ಪಟ್ಟಿದ್ದ ಯುದ್ಧ ಖೈದಿಯಾಗಿದ್ದನು (14:12, 16); ಹೀಗಿದ್ದಾಗ್ಯೂ ಆತನು ಸೊದೋಮಿಗೆ ಹಿಂದಿರುಗಿ ಹೋಗಿದ್ದನು. ಅಂತಹ

ಅನುಭವವೊಂದು ಅವನ ಜೀವಿತವು ದೇವರ ಚಿತ್ತದೊಂದಿಗೆ ಸಾಮರಸ್ಯದಿಂದಿಲ್ಲ ಎಂಬ ಎಚ್ಚರಿಕೆಯನ್ನು ಅವನಿಗೆ ಕೊಟ್ಟಿರಬೇಕಿತ್ತು; ಆದರೆ ಅಂಥ ಯೋಚನೆಗಳು ಅವನಿಗೆ ತೋಚಿದ್ದಲ್ಲಿ, ಅವನು ಅವುಗಳಿಗೆ ಕಿವಿಗೊಡಲಿಲ್ಲ ಎಂದಾಗುತ್ತದೆ. ಬದಲಾಗಿ, ಆತನು ಪಟ್ಟಣಕ್ಕೆ ಹಿಂದಿರುಗಿ ತನ್ನ ಕುಟುಂಬವನ್ನು ಆ ಸ್ಥಳದಲ್ಲಿದ್ದ ಕೆಟ್ಟತನಕ್ಕೊಳಪಡಿಸಿದ್ದನು. ತಾನು ಮತ್ತು ತನ್ನ ಕುಟುಂಬವು ಅದರಿಂದ ಗಂಭೀರವಾಗಿ ಪರಿಣಾಮಕ್ಕೊಳಗಾಗುವ ಅಗತ್ಯವಿರುವದಿಲ್ಲ ಎಂದು ತನ್ನೊಳಗೆ ತರ್ಕಿಸಿಕೊಂಡಿರಬಹುದು, ಆದರೆ ಅವುಗಳು ಪರಿಣಾಮವನ್ನು ಬೀರಿದ್ದವು.

ನಾವು ಎಲ್ಲಿ ಜೀವಿಸುತ್ತೇವೆ ಮತ್ತು ಕೆಲಸ ಮಾಡುತ್ತೇವೆ, ಮತ್ತು ಯಾರೊಂದಿಗೆ ನಿಕಟ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತೇವೆ ಎಂಬುದರ ಕುರಿತು ಜಾಗರೂಕತೆಯಿಂದಿರಬೇಕು. ಯಾಕೋಬನು ಹೇಳಿದ ಪ್ರಕಾರ, "ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ" (ಯಾಕೋಬ 4:4). ಅಲ್ಲದೆ ನಮ್ಮ ಮಕ್ಕಳು ಯಾವ ವಿಧವಾದ ಸ್ನೇಹಿತರನ್ನು ಮಾಡಿಕೊಳ್ಳುತ್ತಾರೆಂಬ ವಿಷಯದಲ್ಲಿ ಸಹ ಕಾಳಜಿ ಹೊಂದಿರಬೇಕು. ಯುವ ಜನರು ಸಹಜವಾಗಿಯೇ ಬೇರೆಯವರಿಂದ ಇಷ್ಟಪಡಲ್ಪಡಬೇಕು ಮತ್ತು ಸೇರಿಸಿಕೊಳ್ಳಲ್ಪಡಬೇಕೆಂದು ಬಯಸುತ್ತಾರೆ, ಮತ್ತು "ಇಹಲೋಕದ ನಡವಳಿಕೆಯನ್ನು ಅನುಸರಿಸಬೇಕು" (ರೋಮಾ 12:2) ಒತ್ತಡವು ಅವರ ಮೇಲೆ ಯಾವಾಗಲೂ ಇರುತ್ತದೆ. ತಮ್ಮ ಸಂಗಡಿಗರಂತೆಯೇ ತಾವು ಮಾಡಬೇಕೆಂಬ ಒತ್ತಡಕ್ಕೊಳಗಾಗದೆ ಇರುವದು ಯಾರಿಗೇ ಆಗಲಿ, ವಿಶೇಷವಾಗಿ ಮಕ್ಕಳಿಗೆ ಸುಲಭವಾಗಿರುವದಿಲ್ಲ.

ನಾವು ಲೋಕದಿಂದ ತಪ್ಪಿಸಿಕೊಂಡು ಓಡಲಾಗದು; ಲೋಕದಲ್ಲಿದ್ದರೂ ಲೋಕಕ್ಕೆ ಸಂಬಂಧಪಟ್ಟವರಾಗಿ ಇರದಿರುವುದೇ ನಮಗಿರುವ ಸವಾಲು ಆಗಿರುತ್ತದೆ (ಯೋಹಾನ 17:14-18). ಲೋಕದೊಳಗೆ ಎಳೆಯಲ್ಪಡದೆಯೇ ಅದನ್ನು ಹೇಗೆ ಬದಲಾಯಿಸಬೇಕೆಂಬುದಕ್ಕೆ ಯೇಸುವೇ ನಮಗೆ ಪ್ರಧಾನ ಉದಾಹರಣೆಯಾಗಿದ್ದಾನೆ. ಬಹಳಷ್ಟು ಜನರು ತಮ್ಮ ಸ್ವಬಲದಿಂದ ಲೋಕದ ಒತ್ತಡವನ್ನು ಎದುರಿಸಿ ನಿಲ್ಲುವಷ್ಟು ಬಲಿಷ್ಠರಾಗಿರುವದಿಲ್ಲ. ಜ್ಞಾನಿಯು ಒಂದು ಸಾರಿ ಹೀಗೆ ಹೇಳಿದನು, "ಒಬ್ಬನಿಗಿಂತ ಇಬ್ಬರು ಲೇಸು; ... ಒಬ್ಬನು ಬಿದ್ದರೆ ಇನ್ನೊಬ್ಬನು ಎತ್ತುವನು" (ಪ್ರಸಂಗಿ 4:9, 10). ಬಳಿಕ ಆತನು ಮುಂದುವರೆಸಿ ಹೇಳಿದ್ದೇನೆಂದರೆ, "ಒಬ್ಬೊಂಟಿಗನನ್ನು ಜಯಿಸಬಲ್ಲವನಿಗೆ ಇಬ್ಬರು ಎದುರಾಗಿ ನಿಲ್ಲಬಹುದು" (ಪ್ರಸಂಗಿ 4:12). ಈ ವಚನಗಳಲ್ಲಿ ಮುಖ್ಯ ಚರ್ಚೆಯಾಂಶವು ಶಾರೀರಿಕ ಶಕ್ತಿ ಮತ್ತು ಬಿದ್ದು ಹೋಗಿರುವ ಸಂಗಡಿಗನ ಪ್ರಯೋಜನಾರ್ಥವಾಗಿ ಒಬ್ಬನು ಒದಗಿಸುವ ಸಹಾಯವನ್ನು ಕುರಿತು ಆಗಿರುತ್ತದೆ, ಆದರೆ ತಿರಸ್ಕಾರ ಮತ್ತು ಹಿಂಸೆಯ ಸಮಯಗಳಲ್ಲಿನ ಅಪಾಯಗಳನ್ನು ಮತ್ತು ಶೋಧನೆಯನ್ನು ಎದುರಿಸಿ ನಿಲ್ಲುವಂತೆ ಸಂಗಡಿಗನನ್ನು ಶಕ್ತಗೊಳಿಸಲು ನೈತಿಕ ಹಾಗೂ ಆತ್ಮೀಕ ಬಲವನ್ನು ಒದಗಿಸುವ ಒಬ್ಬ ಸ್ನೇಹಿತನಿಗೆ ಸಹ ಇದೇ ತತ್ವಗಳು ಅನ್ವಯವಾಗುತ್ತವೆ. ನಿಖರವಾಗಿ ಇದೇ ಕಾರಣಕ್ಕಾಗಿಯೇ ಕರ್ತನು ತನ್ನ ಶಿಷ್ಯರನ್ನು ಇಬ್ಬಿಬ್ಬರಾಗಿ ಕಳುಹಿಸಿ ಕೊಟ್ಟನು (ಮಾರ್ಕ 6:7), ಮತ್ತು ಬಹುಶಃ ಲೋಟನು ಅಬ್ರಹಾಮನನ್ನು ತೊರೆದು ಸೊದೋಮಿನ ಸಮೀಪಕ್ಕೆ ಹೋಗಿ ವಾಸಿಸಲಾರಂಭಿಸಿದ ವೇಳೆ ಇದೇ ಕಾರಣಕ್ಕಾಗಿಯೇ ಅವನ ಆತ್ಮೀಕ ಅವನತಿಯು ಆರಂಭಗೊಂಡಿರಬಹುದಾಗಿದೆ.

*ದುಷ್ಟ ಸಹವಾಸವು ಜೀವಿತದಲ್ಲಿ ನಿಜಕ್ಕೂ ಯಾವುದು ಪ್ರಾಮುಖ್ಯ ಎಂಬ ವಿಷಯದಲ್ಲಿ ನಮ್ಮ ಆದ್ಯತೆಗಳನ್ನು ತಿರುಚಿ ಹಾಕುವ ಪ್ರವೃತ್ತಿ ಹೊಂದಿರುತ್ತದೆ.* ಇದು ಒಬ್ಬನನ್ನು ತನ್ನ ಬಗ್ಗೆಯೇ ಮುಖ್ಯ ಗಮನವನ್ನು ಹರಿಸುವಂತೆ ಮಾಡುತ್ತದೆ: ಆತನ ಭೋಗಗಳು, ಅಗತ್ಯತೆಗಳು, ಸಾಧನೆಗಳು, ಮತ್ತು ಸ್ವತ್ತುಗಳು. ಲೋಟನಿಗೆ ತನ್ನ ಜೀವಿತದಲ್ಲಿ ಮೊದಲ

ಸ್ಥಾನವನ್ನು ದೇವರಿಗೆ ಕೊಡಬೇಕೆನ್ನುವಷ್ಟು ಅಥವಾ ತನಗೆ, ತನ್ನ ಕುಟುಂಬಕ್ಕೆ, ಅವನ ದನಕಾಯುವವರಿಗೆ, ಮತ್ತು ಅವರ ಕುಟುಂಬಗಳಿಗೆ ಸೊದೋಮನಿಂದ ಎದುರಾಗುವ ಶಾರೀರಿಕ ಹಾಗೂ ಆತ್ಮೀಕ ಅಪಾಯಗಳನ್ನು ಗುರುತಿಸುವಷ್ಟು ನಂಬಿಕೆಯು ಇರಲಿಲ್ಲ.

ಲೋಟನ ಆರಂಭಿಕ ಜೀವನದ ಕುರಿತಾಗಿ ನಮಗೆ ಅಷ್ಟಾಗಿ ತಿಳಿಯದು. ದೇವರು ಅಬ್ರಹಾಮನನ್ನು ಕರೆದ ವೇಳೆ ಈತನ ಕುಟುಂಬವು ವಿಗ್ರಹಾರಾಧನೆಯಲ್ಲಿ ತೊಡಗಿತ್ತು (ಯೆಹೋಶುವ 24:2); ಮತ್ತು ಇವರು ಊರ್ ಪಟ್ಟಣವನ್ನು ತೊರೆದು ಕಾನಾನಿಗೆ ಪ್ರಯಾಣವನ್ನು ಆರಂಭಿಸುವ ಮುನ್ನವೇ ಆತನ ತಂದೆಯಾ ಹಾರಾನನು ಮರಣಿಸಿದ್ದನು (11:28, 31). ಆತನ ತಾತನಾದ ತೆರಹ ಅಥವಾ ದೊಡ್ಡಪ್ಪನಾದ ನಾಹೋರನಾಗಲಿ ಏಕೈಕ ಸತ್ಯ ದೇವರಲ್ಲಿ ನಂಬಿಕೆಯಿಡುವವರಾದರು ಎಂಬುದಾಗಿ ಯಾವ ವಾಕ್ಯವೂ ತಿಳಿಸುವದಿಲ್ಲ. ಆ ವಿಷಯದಕ್ಕೆ ಸಂಬಂಧ ಪಟ್ಟಂತೆ, ಲೋಟನು ಒಬ್ಬ ವಿಶ್ವಾಸಿಯಾಗಿದ್ದನೆಂದು ಯಾವ ವಾಕ್ಯವೂ ತಿಳಿಸುವದಿಲ್ಲ, ಆದಾಗ್ಯೂ ಅವನು ಸ್ವಲ್ಪ ನಂಬಿಕೆಯನ್ನು ಹೊಂದಿದ್ದನೆಂಬುದನ್ನು ಅದು ಪರೋಕ್ಷವಾಗಿ ಸೂಚಿಸುತ್ತದೆ, ಬಹುಶಃ ಅವನ ದೊಡ್ಡಪ್ಪನಾದ ಅಬ್ರಹಾಮನಿಂದಾಗಿ ಅದನ್ನು ಹೊಂದಿದ್ದನೆಂದು ಕಾಣಿಸುತ್ತದೆ. ಆತನು ಒಂದು ಯಜ್ಞವೇದಿ ಕಟ್ಟಿದನೆಂಬುದಾಗಲಿ, ಪ್ರಾರ್ಥಿಸಿದನು, ಅಥವಾ ಅಬ್ರಹಾಮನ ಹಾಗೆ ದೇವರನ್ನು ಆರಾಧಿಸಿದನೆಂದಾಗಲಿ ನಾವು ಓದುವದಿಲ್ಲ. ಆತನು ಅವನ ಆತ್ಮಕ್ಕೆ "ಕರಕರೆ" ಉಂಟು ಮಾಡಿದ ಸೊದೋಮಿನವರ ದುಷ್ಟ ಜೀವನಶೈಲಿಗೆ ಹೋಲಿಸಿ ಮಾತ್ರವೇ "ನೀತಿವಂತ" ಎಂದು ಬಣ್ಣಿಸಲ್ಪಟ್ಟಿದ್ದಾನೆ (2 ಪೇತ್ರ 2:7, 8).

ಲೋಟನು ತನಗೆ ಉಂಟಾದ ಸಮೃದ್ಧಿಯಾದ ಆಶೀರ್ವಾದಗಳಿಗಾಗಿ ದೇವರಿಗೆ ಸ್ತೋತ್ರ ಸಲ್ಲಿಸಿದನೆಂದು ವಾಕ್ಯವು ಎಲ್ಲಿಯೂ ತಿಳಿಸುವದಿಲ್ಲ, ದೇವದೂತರು ಅವನನ್ನು ಸನ್ನಿಹಿತವಾಗಿದ್ದ ನಾಶನದ ಕುರಿತಾಗಿ ಎಚ್ಚರಿಸಿದಾಗ ಆತನು ಕೃತಜ್ಞನಾಗಿಯೂ ಇರಲಿಲ್ಲ. ವಾಸ್ತವಿಕದಲ್ಲಿ, ಆತನನ್ನು ಮತ್ತು ಅವನ ಕುಟುಂಬವನ್ನು ಕಾಪಾಡುವದಕ್ಕೆ ಪರಲೋಕದ ದೂತರು ಮಾಡಿದ ಪ್ರಯತ್ನವನ್ನು ಆತನು ಪ್ರತಿರೋಧಿಸಿದ್ದನು. ಅವರು ಅಪ್ಪಣೆ ಕೊಟ್ಟ ಪ್ರಕಾರ ಬೆಟ್ಟಗಳಿಗೆ ಓಡಿ ಹೋಗುವದರ ಬದಲಾಗಿ, ಈತನು ಅವರೊಂದಿಗೆ ವಾಗ್ವಾದ ಮಾಡಿದನು, ಚೋಗರೆಂಬ ಊರು ಪ್ರಯಾಣಿಸುವದಕ್ಕೆ ಸಾಕಾದದ್ದಾಗಿದೆ ಎಂದು ಬೇಡಿಕೊಂಡನು. ಸೊದೋಮ ಪಟ್ಟಣವು ಅವನ ಮೇಲೆ ಎಷ್ಟೊಂದು ಹಿಡಿತವನ್ನು ಹೊಂದಿತ್ತೆಂದರೆ ಲೋಟನನ್ನು ಪಟ್ಟಣದೊಳಗಿಂದ ಎಳೆದುಕೊಂಡು ಹೊರಗೆ ಬರಬೇಕಾದ ಸ್ಥಿತಿಯು ಏರ್ಪಟ್ಟಿತ್ತು. ಆತನು ಅವನ ಅಳಿಯಂದಿರಿಗೆ ಎಚ್ಚರಿಸಿದನಾದರೂ, ಆತನು ತನ್ನ ದನಕಾಯುವವರಿಗೆ ಮತ್ತು ಅವರ ಕುಟುಂಬಗಳಿಗೆ ಎಚ್ಚರಿಸಲು ಯಾವ ಪ್ರಯಾಸವನ್ನು ತೆಗೆದುಕೊಳ್ಳಲಿಲ್ಲ. ಆತನ ಆದ್ಯತೆಗಳು ತಿರುಚಲ್ಪಟ್ಟಿದ್ದವು, ಮತ್ತು ಆ ದುಷ್ಟ ಪಟ್ಟಣವಾದ ಸೊದೋಮಿಲ್ಲದ ಜೀವನವನ್ನು ಆತನು ಯೋಚಿಸುವದಕ್ಕಾಗಲಿಲ್ಲ. ಯೇಸುವು ಯೆರೂಸಲೇಮಿನ ನಾಶನವು ಸಮೀಪವಾಗಿರುವದನ್ನು ಕಂಡಾಗ (ನೋಡಿರಿ ಮತ್ತಾಯ 24:2, 16-21), ಜನರು ತಮ್ಮ ಮನೆಗಳನ್ನು ಮತ್ತು ಸ್ವತ್ತುಗಳನ್ನು ನೋಡುವದಕ್ಕಾಗಿ ಹಿಂದಿರುಗಕೂಡದೆಂದು ಎಚ್ಚರಿಸುತ್ತಾ ಅವರಿಗೆ ಹೀಗೆ ಹೇಳಿದನು, "ಲೋಟನ ಹೆಂಡತಿಯನ್ನು ನೆನಪಿಗೆ ತಂದುಕೊಳ್ಳಿರಿ" (ಲೂಕ 17:32).

*ದುಷ್ಟ ಸಹವಾಸವು ಒಬ್ಬನಿಗೆ ತನ್ನ ಸ್ನೇಹಿತರು, ಕುಟುಂಬ, ಮತ್ತು ಸಂಗಡಿಗರ ಮೇಲಿರುವ ಪ್ರಭಾವವನ್ನು ಹಾಳು ಮಾಡುತ್ತದೆ.* ಲೋಟನು ಈ ಕೆಟ್ಟ ವಾತಾವರಣದಲ್ಲಿ ಕೆಲವು ಕಾಲ ಜೀವಿಸಿದ್ದನು, ಸೊದೋಮಿನವರ ಹೊಲಸು ಅಭ್ಯಾಸಗಳ ವಿರುದ್ಧವಾಗಿ ಧ್ವನಿಯನ್ನು

ಎತ್ತದವನಾಗಿ ಇದ್ದನೆಂಬುದು ಸ್ಪಷ್ಟವಾಗುತ್ತದೆ. ಆತನು ತನ್ನ ಮನೆಯ ಆಶ್ರಯದಲ್ಲಿ ಬಂದಿದ್ದ ಪುರುಷರನ್ನು (ದೂತರನ್ನು) ಕಾಮುಕತೆಯಿಂದ ಕೂಡಿದ ಜನರು ಸಾಮೂಹಿಕವಾಗಿ ಅತ್ಯಾಚಾರ ನಡಿಸುವದಕ್ಕೆ ಬಂದಾಗ ಅವರನ್ನು ಈತನು ತಡೆಯಲು ಪ್ರಯತ್ನಿಸಿದಾಗ ಒಳ್ಳೇದಕ್ಕಾಗಿ ಅತನಿಗಿದ್ದ ದುರ್ಬಲ ಪ್ರಭಾವವು ಪರಿಣಾಮವಿಲ್ಲದ್ದಾಗಿತ್ತು (19:8). ಅವರು ತಮ್ಮ ಪಟ್ಟಣಕ್ಕೆ ಪ್ರವಾಸಿಗಳಾಗಿ ಬಂದಿರುವ ಪುರುಷರಿಗಿಂತಲೂ ತನ್ನ ಹೆಣ್ಣು ಮಕ್ಕಳ ಮೇಲೆ ತಮ್ಮ ಕಾಮತೃಷೆಯನ್ನು ತೀರಿಸಿಕೊಂಡರೆ ಉತ್ತಮವೆಂಬ ಆಘಾತಕಾರಿ ಸಲಹೆಯನ್ನು ಕೊಟ್ಟಿದ್ದನು. ಯಾವದು ಒಳ್ಳೇದು ಮತ್ತು ಪರಿಪೂರ್ಣವಾಗಿದೆಯೋ ಅದರ ಬೆಂಬಲಕ್ಕೆ ನಿಲ್ಲುವದರ ಬದಲಾಗಿ, ಎರಡು ಕೆಟ್ಟವುಗಳೊಳಗೆ ಕಡಿಮೆಯಾಗಿರುವದೆಂದು ತಾನು ಅಂದುಕೊಂಡ ಸಂಗತಿಯನ್ನು ಕುರಿತು ಲೋಟನು ಪ್ರಸ್ತಾಪವಿಟ್ಟನು: ತನ್ನ ಇಬ್ಬರು ಅಸಹಾಯಕ ಪುತ್ರಿಯರನ್ನು ಈ ವಿಕೃತ ಮನುಷ್ಯರ ವಶಕ್ಕೆ ಒಪ್ಪಿಸುವುದು. ಅಂಥ ಹೊಸಲು ಆಚಾರಗಳಿಗೆ ಅಷ್ಟೊಂದು ಸಮೀಪವಾಗಿ ಜೀವಿಸುವದರಿಂದಾಗಿ ಆತನ ನೀತಿವಂತಿಕೆಯು ಹೇಗೆ ರಾಜಿ ಮಾಡಿಕೊಳ್ಳಲ್ಪಟ್ಟಿತ್ತೆಂಬುದನ್ನು ಇದು ದೃಷ್ಟಾಂತಪಡಿಸುತ್ತದೆ. ಈತನು ತನ್ನ ನೈತಿಕ ದಿಕ್ಸೂಚಿಯನ್ನು ಕಳೆದುಕೊಂಡಿದ್ದನೆಂದು ಕಾಣಿಸುತ್ತದೆ, ಸೊದೋಮಿನವರ ಭಯದಿಂದಾಗಿ ಆತನು ಒಬ್ಬ "ರಹಸ್ಯ" ಶಿಷ್ಯನಾಗಿ ಇರುವದಕ್ಕೆ ಶ್ರಮಿಸುತ್ತಿದ್ದನೆಂದು ಅನ್ನಿಸುತ್ತದೆ (ಯೋಹಾನ 19:38). ಅನ್ಯಧರ್ಮಿಯ ಕತ್ತಲೆಯಿಂದ ತುಂಬಿದ ಒಂದು ಪಟ್ಟಣದಲ್ಲಿ ಬೆಳಕಾಗಿ ಇರುವದರ ಬದಲಾಗಿ, ಆತನು ತನ್ನ ದೀಪವನ್ನು ಹಚ್ಚಿ ಬೆಳಕಿನ ಅಗತ್ಯತೆಯು ಅತ್ಯವಶ್ಯಕವಾಗಿದ್ದ ಜನರಿಗೆ ಕಾಣಿಸದಂತೆ ಅದನ್ನು "ಕೊಳಗದೊಳಗೆ" ಇಟ್ಟನೆಂದು ಕಾಣಿಸುತ್ತದೆ (ಮತ್ತಾಯ 5:15).

ಕಾಮುಕತೆ ಜನರ ಗುಂಪಿಗೆ ತಮ್ಮ ತಂದೆಯು ಅಂಥ ಸಲಹೆಯೊಂದನ್ನು ಕೊಟ್ಟದ್ದನ್ನು ಕೇಳಿಸಿಕೊಂಡ ಅವನ ಪುತ್ರಿಯರಿಗಾದ ಅನುಭವವನ್ನು ಒಬ್ಬನು ಊಹಿಸಿಕೊಳ್ಳಲು ಮಾತ್ರವೇ ಸಾಧ್ಯ. ಅವರು ಆತನ ಕಡೆಗೆ ಮತ್ತು ಅವನ ದೇವರ - ಒಂದು ವೇಳೆ ಆತನು ಅವರಿಗೆ ಅಬ್ರಹಾಮನ ದೇವರಾದ ಯೆಹೋವನ ಕುರಿತು ಕಲಿಸಿ ಕೊಟ್ಟಿದ್ದಲ್ಲಿ - ಕಡೆಗಿರುವ ಎಲ್ಲಾ ಗೌರವವನ್ನು ಕಳೆದುಕೊಂಡಿರಬಹುದು. ಇವರನ್ನು ಕಾಪಾಡುವದರ ಬದಲಾಗಿ ಈ ದುಷ್ಟ ಮನುಷ್ಯರಿಗೆ ಇವರನ್ನು ಒಪ್ಪಿಸುವೆನೆಂದು ಹೇಳುವ ಮೂಲಕ, ತಮ್ಮ ತಂದೆಯು ಇವರನ್ನು ಪ್ರೀತಿಸುವದಕ್ಕಿಂತಲೂ ಅಧಿಕವಾಗಿ ಆ ನಾಚಿಕೆಯಿಲ್ಲದ ಜನರ ಗುಂಪಿನ ಅನುಮೋದನೆಯನ್ನು ಹೆಚ್ಚು ಪ್ರೀತಿಸಿದನೆಂಬ ನಿರ್ಣಯಕ್ಕೆ ಅವರು ಬಂದಿದ್ದರು (ನೋಡಿರಿ 1 ಯೋಹಾನ 2:15, 16). ಅನಂತರದಲ್ಲಿ ಈ ಪುತ್ರಿಯರು ಮಕ್ಕಳಿಲ್ಲದೆ ಇರುವದಕ್ಕಿಂತಲೂ ತಮ್ಮ ತಂದೆಯ ಸಂಗಡ ನಿಷಿದ್ಧವಾದ ರಕ್ತ ಸಂಬಂಧಿ ಹಾದರವನ್ನು ನಡಿಸುವದೇ ಮೇಲು ಎಂಬ ತರ್ಕಿಸುವವರಾದರು ಎಂಬುದರಲ್ಲಿ ಏನಾದರೂ ಆಶ್ಚರ್ಯವಿರುತ್ತದೋ? ಆತನು ಅವರ ಮೇಲೆ ಕಾಮದ-ಹುಚ್ಚು ಹಿಡಿದಿದ್ದ ಜನರ ಗುಂಪು ಮಾಡುವಂತೆ ಅನುಮತಿಸುವದಕ್ಕಿದ್ದ ಅಪರಾಧಕ್ಕಿಂತಲೂ ಇದೇನೂ ಹೆಚ್ಚಿನದಲ್ಲ ಎಂಬ ನಿರ್ಧಾರಕ್ಕೆ ಅವರು ಬಂದಿರಬಹುದಾಗಿದೆ.

ಮನೆಯ ಹೊರಗಿದ್ದ ಜನರ ವಿಷಯದಲ್ಲಾದರೋ, ಅವರು ತಮ್ಮ ಪಾಪಭರಿತ ಅಭಿಲಾಷೆಗಳ ಮೇಲೆ ನ್ಯಾಯಾಧಿಪತಿಯಾಗಿ ವರ್ತಿಸಿದ್ದಕ್ಕಾಗಿ ಲೋಟನ ವಿರುದ್ಧವಾಗಿ ಕಟುವಾದ ಹಗೆತನದಿಂದ ಪ್ರತಿಕ್ರಿಯಿಸಿದರು - ಒಬ್ಬ ಪರದೇಶಿ. ಅವರು ಇಬ್ಬರು ಅತಿಥಿಗಳಿಗೆ ಮಾಡಬೇಕೆಂದು ಯೋಜಿಸಿದ್ದಕ್ಕಿಂತಲೂ ಘೋರವಾದದ್ದನ್ನು ಇವನಿಗೆ ಮಾಡುವ ಬೆದರಿಕೆ ಹಾಕಿದರು (19:9).

ಲೋಟನ ವಿಷಯದಲ್ಲಾದರೋ, ನಾವು ಈ ವಿಧವಾಗಿ ಕೇಳಿಕೊಳ್ಳಲೇ ಬೇಕು, "ಅವನ ದನಕಾಯುವವರು ಮತ್ತು ಅವರ ಕುಟುಂಬಗಳವರು ವಿನಾಶದಲ್ಲಿ ಬಲಿಯಾಗದಂತೆ

ಇರುವದಕ್ಕಾಗಿ ಆತನು ಅವರಿಗೆ ಯೋರ್ದನ್ ಕಣಿವೆಯಲ್ಲಿ ಸನ್ನಿಹಿತವಾಗಿದ್ದ ನಾಶನದ ಕುರಿತಾಗಿ ಅವರನ್ನು ಎಚ್ಚರಿಸುವದಕ್ಕೆ ಏಕೆ ಯಾವ ಪ್ರಯತ್ನವನ್ನೂ ಮಾಡಲಿಲ್ಲ?" ಇವರು ಸಹ ಅವನ ಅಳಿಯಂದಿರ ರೀತಿಯಲ್ಲಿ ಆತನನ್ನು ಅಪಹಾಸ್ಯ ಮಾಡಿ, ಇವನು ತಮಾಷೆ ಮಾಡುತ್ತಿರಬಹುದೆಂದು ಯೋಚಿಸಿ ನಕ್ಕಿರುತ್ತಿದ್ದರೋ (19:14)? ಆತನು ತನ್ನ ಹಿಂಡುಗಳನ್ನು ಮತ್ತು ಮಂದೆಗಳನ್ನು ವಶಕ್ಕೆ ಕೊಟ್ಟಿದ್ದ ಇವರೆಲ್ಲರ ದೃಷ್ಟಿಯಲ್ಲಿ ತನ್ನ ವಿಶ್ವಾಸರ್ಹತೆಯನ್ನೆಲ್ಲಾ ಕಳೆದುಕೊಂಡಿದ್ದನೋ? ಈ ಪ್ರಶ್ನೆಗಳಿಗೆ ವಾಕ್ಯವು ಯಾವ ಉತ್ತರಗಳನ್ನೂ ನೀಡುವದಿಲ್ಲ; ಆದರೆ ಲೋಟನಿಗೆ ದೂತರ ಸಂಗಡ ವಾಗ್ವಾದ ಮಾಡುವದಕ್ಕೆ ಅಷ್ಟೊಂದು ಸಮಯವಿದ್ದಿರುವದಾದರೆ, ತನ್ನ ವಿಶ್ವಾಸರ್ಹ ಸೇವಕರಿಗೆ ಬರಲಿರುವ ಅಪಾಯದ ಕುರಿತು ಎಚ್ಚರಿಸುವದಕ್ಕೆ ಖಂಡಿತವಾಗಿಯೂ ಸಮಯವು ಇದ್ದಿರಬಹುದಾಗಿದೆ.

ಲೋಟ, ಆತನ ಹೆಂಡತಿ, ಮತ್ತು ಅವನ ಪುತ್ರಿಯರ ಮೇಲೆ ಲೋಕದ ಮೇಲಿನ ಪ್ರೀತಿಯು (1 ಯೋಹಾನ 2:15) ಎಷ್ಟೊಂದು ಹಿಡಿತವನ್ನು ಹೊಂದಿತ್ತೆಂದರೆ ಅವರಿಗೆ ತಮ್ಮ ಮನೆ ಮತ್ತು ಸ್ವತ್ತುಗಳನ್ನು ಬಿಟ್ಟು ಕೊಡುವದಕ್ಕೆ ಸಾಧ್ಯವಾಗಲಿಲ್ಲ. ದೂತರು ಅವರ ಕೈಗಳನ್ನು ಹಿಡಿದುಕೊಂಡು ಸೊದೋಮಿನಿಂದ ಹೊರಗೆ ಎಳೆದುಕೊಂಡು ಬರಬೇಕಾಗಿತ್ತು (19:16). ಲೋಟ ಮತ್ತು ಆತನ ಕುಟುಂಬವು ಸೊದೋಮಿನಲ್ಲಿ ತಮ್ಮ ಗಂಟು ಮಾಡಿಟ್ಟುಕೊಂಡಿದ್ದರು (ನೋಡಿರಿ ಮತ್ತಾಯ 6:21, 24); ಮತ್ತು ಅದು ಇಲ್ಲದೆ ಹೋದಾಗ, ಅವರ ಹೃದಯವು ಒಡೆದಿತ್ತು, ದಯನೀಯ ಜನರಾಗಿ ಮಾರ್ಪಟ್ಟಿದ್ದರು.

*ದುಷ್ಟ ಸಂಗಡಿಗರ ಅಭ್ಯಾಸವು, ತಡೆಯಲ್ಪಡದೆ ಹೋದಲ್ಲಿ ಮುಂದೆ ಅದು ದೇವರ ವಿನಾಶಕಾರಿ ನ್ಯಾಯತೀರ್ಪಿಗೆ ನಡಿಸುತ್ತದೆ.* ದೇವರು "ಪ್ರೀತಿಸ್ವರೂಪಿ" (1 ಯೋಹಾನ 4:8) ಆಗಿರುವದರಿಂದ, ಆತನ ಮೊದಲ ಒಲವು ಬಿದ್ದು ಹೋಗಿರುವ ಲೋಕವನ್ನು ಪ್ರೀತಿಸಿ ವಿಮೋಚಿಸುವದೇ ಆಗಿರುತ್ತದೆ (ಯೋಹಾನ 3:16). ಆತನು ಮಾನವರ ವಿಷಯದಲ್ಲಿ ದೀರ್ಘಶಾಂತನಾಗಿರುತ್ತಾನೆ, ಅವಿಧೇಯ ವ್ಯಕ್ತಿಗಳು ಆತನ ಕಡೆಗೆ ತಿರುಗಿಕೊಂಡು ರಕ್ಷಣೆ ಹೊಂದುವರೆಂಬುದಾಗಿ ನಿರೀಕ್ಷಿಸುತ್ತಿರುತ್ತಾನೆ (ವಿಮೋಚನಕಾಂಡ 34:6, 7). ಹೇಗೂ, ಹೃದಯಗಳು ಕಠಿಣಗೊಂಡಾಗ, ಮಾನವರ ಅಪರಾಧವು ಪೂರ್ಣಗೊಂಡಾಗ, ಮತ್ತು ದೇವರು ಇನ್ನು ಮೇಲೆ ಪಶ್ಚಾತ್ತಾಪವಿಲ್ಲದ ಹೃದಯಗಳನ್ನು ಸಹಿಸಿಕೊಳ್ಳಲಾಗದ ವೇಳೆ, ಪಾಪದ ವಿರುದ್ಧವಾಗಿ ತನ್ನ ನೀತಿಯುಳ್ಳ ನ್ಯಾಯತೀರ್ಪಿನ ರೂಪದಲ್ಲಿ ದುಷ್ಟರ ಮೇಲೆ ನಾಶನವನ್ನು ಬರಮಾಡುತ್ತಾನೆ (18:20, 25). ಆತನು 6ರಿಂದ 8 ಅಧ್ಯಾಯಗಳಲ್ಲಿ ನೋಹನ ಕಾಲದ ವೇಳೆ ಹೀಗೆ ಮಾಡಿದನು, ಮತ್ತು ಪುನಃ 19:24, 25ರಲ್ಲಿ ಸೊದೋಮ ಮತ್ತು ಗೊಮೋರಗಳ ದಳ್ಳುರಿಯ ವೇಳೆಯಲ್ಲಿ ಹೀಗೆ ಮಾಡಿದನು.

ಲೋಟನು ತನ್ನ ನಿವಾಸವನ್ನಾಗಿ ಮಾಡಿಕೊಂಡ ದುಷ್ಟ ಪಟ್ಟಣವು ಯೇಸುವಿನ ಬೋಧನೆಗಳಿಗೆ ಒಂದು ದೃಷ್ಟಾಂತವಾಗಿ ಕೆಲಸ ಮಾಡಿತು. ಆತನು ತಾನು ಮಾಡಿದ "ಮಹತ್ಕಾರ್ಯಗಳು ಸೊದೋಮಿನಲ್ಲಿ ನಡೆದಿದ್ದರೆ ಅದು ಇಂದಿನವರೆಗೂ ಉಳಿಯುತ್ತಿತ್ತು" ಎಂದು ಹೇಳಿದನು (ಮತ್ತಾಯ 11:23, 24). ಲೋಟನ ದಿನದಲ್ಲಿ, ಜನರು "ಊಟಮಾಡುತ್ತಿದ್ದರು, ಕುಡಿಯುತ್ತಿದ್ದರು, ಕೊಳ್ಳುತ್ತಿದ್ದರು, ಮಾರುತ್ತಿದ್ದರು, ನೆಡುತ್ತಿದ್ದರು, ಕಟ್ಟುತ್ತಿದ್ದರು. ಆದರೆ ಲೋಟನು ಸೊದೋಮ್ ಊರನ್ನು ಬಿಟ್ಟುಹೋದ ದಿವಸದಲ್ಲಿ ಆಕಾಶದಿಂದ ಬೆಂಕಿ ಗಂಧಕಗಳು ಸುರಿದು ಅವರೆಲ್ಲರನ್ನು ನಾಶಮಾಡಿದವು." ಯೇಸು ಹೀಗೆ ಘೋಷಿಸಿದನು, "ಮನುಷ್ಯಕುಮಾರನು ಪ್ರತ್ಯಕ್ಷವಾಗುವ ದಿವಸದಲ್ಲಿ ಅದೇ ರೀತಿಯಾಗಿ ಇರುವದು" (ಲೂಕ 17:28-30).

ಒಂದು ಕಾಲದಲ್ಲಿ ಫಲವತ್ತಾಗಿದ್ದ ಯೋರ್ದನ್ ಪ್ರದೇಶದಲ್ಲಿನ ಪಟ್ಟಣಗಳ ನಾಶನವು ಲೋಟನ ಕಾಲದಲ್ಲಿ ನಡಿಸಲಾಗುತ್ತಿದ್ದಂಥ ಕೆಟ್ಟತನದ ವಿರುದ್ಧವಾಗಿ ಬಂದ ದೇವರ ನೀತಿಯುಳ್ಳ ನ್ಯಾಯತೀರ್ಪಿಗೆ ಒಂದು ಮೌನವಾದ ಸಾಕ್ಷಿಯನ್ನು ಕೊಡುವದಾಗಿದೆ. ಈ ಘಟನೆಗಳ ದಾಖಲೆಯು ಅಂತಹ ಸಂಗತಿಗಳನ್ನು ನಡಿಸುವ ಪ್ರತಿಯೊಬ್ಬನಿಗೂ ಒಂದು ಪೂರ್ವಸೂಚಕ ಮತ್ತು ಒಂದು ಎಚ್ಚರಿಕೆಯಂತಿರುತ್ತದೆ: ದೇವರ ಅಂತಿಮ ನ್ಯಾಯತೀರ್ಪು ಬರಲಿದೆ (ರೋಮಾ 1:18-32; 2 ಪೇತ್ರ 2:6-10; ಯೂದನು 7). ನೀತಿವಂತರು ಅಂತಿಮ ಫಲಿತದ ಬಗ್ಗೆ ಹೆದರಬೇಕಾದ ಅಗತ್ಯವಿಲ್ಲ. ದೇವರು ತನ್ನ ಸ್ವಜನರಿಗೆ ನೀಡುವ ಸಂದೇಶವು ಏನೆಂದರೆ, ಲೋಕದ ಪಾಪಗಳ ಪರಿಹಾರ್ಥವಾದ ಯೇಸುವಿನ ಮರಣದ ಕಾರಣದಿಂದ, ಆತನಲ್ಲಿ ವಿಶ್ವಾಸವಿಟ್ಟು ತಮ್ಮ ಜೀವಿತಗಳಲ್ಲಿ ಆತನನ್ನು ಮಹಿಮೆ ಪಡಿಸುವವರನ್ನು ತಪ್ಪಿಸಿ ಕಾಪಾಡುವನು ಎಂಬುದೆ (1 ಥೆಸಲೋನಿಕ 5:1-11; 2 ಪೇತ್ರ 2:7-9). ರಕ್ಷಣೆ ಹೊಂದಬೇಕೆಂದು ಬಯಸುವವರು ನಂಬಿಕೆ ಮತ್ತು ವಿಧೇಯತೆಯಿಂದ ದೇವರ ಸಂದೇಶಕ್ಕೆ ಪ್ರತಿಕ್ರಿಯಿಸಬೇಕು, ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಟ್ಟು, ಯೇಸುವು ದೇವರ ದೈವಿಕ ಮಗನೆಂದು ಅರಿಕೆ ಮಾಡತಕ್ಕದ್ದು, ಮತ್ತು ಪಾಪಗಳ ನಿವಾರಣೆಗಾಗಿ ಆತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳತಕ್ಕದ್ದು (ಅಪೊಸ್ತಲರ ಕೃತ್ಯಗಳು 2:38; ರೋಮಾ 10:8-10).

---

ಅಡಿಟಿಪ್ಪಣಿಗಳು

[1]ಹೆಚ್ಚುವರಿ ವಾಕ್ಯಭಾಗಗಳಿಗಾಗಿ, ನೋಡಿರಿ Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 1059. [2]Victor P. Hamilton, *The Book of Genesis: Chapters 18–50*, The New International Commentary on the Old Testament (Grand Rapids, Mich.: Wm. B. Eerdmans Publishing Co., 1995), 33, n. 25. [3]Brown, Driver, and Briggs, 394. [4]W. Schottroff, "ידע," in *Theological Lexicon of the Old Testament*, trans. Mark E. Biddle, ed. Ernst Jenni and Claus Westermann (Peabody, Mass.: Hendrickson Publishers, 1997), 2:515. [5]Harold G. Stigers, "גּוּר," in *TWOT*, 1:155. [6]John T. Willis, *Genesis*, The Living Word Commentary (Austin, Tex.: Sweet Publishing Co., 1979), 266. [7]Carl Schultz, "עָוֹן," in *TWOT*, 2:650. [8]Edwin Yamauchi, "חֵן," in *TWOT*, 1:302–3. [9]Brown, Driver, and Briggs, 338. [10]ಅಬ್ರಹಾಮನ ಕಥಾನಿರೂಪಣೆಯಲ್ಲಿ ಹಲವಾರು ಘಟನೆಗಳು ಕಾಲವನ್ನು ಉಲ್ಲೇಖಿಸುವದರೊಂದಿಗೆ ಪರಿಚಯಿಸಲ್ಪಟ್ಟಿರುತ್ತವೆ. ಇವುಗಳ ಒಂದು ಪಟ್ಟಿಗೋಸ್ಕರ, ನೋಡಿರಿ Hamilton, 42.

[11]ಯೋರ್ದನ್ ಕಣಿವೆಯು Great Rift-Valley ಎಂಬುದರ ಒಂದು ಭಾಗವಾಗಿರುತ್ತದೆ, ಇದು ಭೂಮಿಯ ಮೇಲಿರುವ ಅತ್ಯಂಥ ಉದ್ದವಾದ ಮತ್ತು ಆಳವಾದ ಬಿರುಕಿನ ಗುರುತು ಆಗಿರುತ್ತದೆ, ಮತ್ತು ಅದು ಪ್ರತಿ ಶತಮಾನದಲ್ಲಿ ಸರಾಸರಿ ಒಂದು ಅತ್ಯಂಥ ದೊಡ್ಡ ಭೂಕಂಪನವನ್ನು ಅನುಭವಿಸುತ್ತದೆ. (George A. Turner, "Earthquake," in *The International Standard Bible Encyclopedia*, rev. ed., ed. Geoffrey W. Bromiley [Grand Rapids, Mich.: Wm. B. Eerdmans Publishing Co., 1982], 2:4.) [12]Bruce K. Waltke, *Genesis: A Commentary* (Grand Rapids, Mich.: Zondervan Publishers, 2001), 279. [13]Derek Kidner, *Genesis: An Introduction and Commentary*, The Tyndale Old Testament Commentaries (Downers Grove, Ill.: Inter-Varsity Press, 1967), 135. [14]Wisdom of Solomon 10:7 (NRSV). [15]Josephus *Antiquities* 1.11.4. [16]Brown, Driver, and Briggs, 461. [17]Gordon J. Wenham, *Genesis 16–50*, Word Biblical Commentary, vol. 2 (Dallas: Word Books, 1994), 62. [18]Hamilton, 53, n. 12.